ಸಂಪುಟ 01 | ಸಂಚಿಕೆ 225 ಮಂಗಳವಾರ 20 ಅಕ್ಟೋಬರ್ 2026 | ಪುಟ 4 | ಬೆಲೆ-2 ರೂ.

Posting registration number : RCR/RNP/116/2026-2028

ಇರ್ಫಾನ್ ಕೆ
ಸಂಪಾದಕರು

MA ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೇಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1)ವಿಜಯದಶಮಿ / ದಸರಾ (Vijayadashami / Dussehra) ಕೆಟ್ಟದರ ಮೇಲೆ ಒಳ್ಳೆಯದರ ವಿಜಯವನ್ನು ಸಾರುವ ಹಬ್ಬ.

2)ಆಯುಧ ಪೂಜೆ (Ayudha Puja) ಉಪಕರಣಗಳು, ವಾಹನಗಳು, ಯಂತ್ರಗಳು ಮತ್ತು ಪುಸ್ತಕಗಳನ್ನು ಪೂಜಿಸುವ ಸಂಪ್ರದಾಯ.

3)ವಿಶ್ವ ಆಸ್ಟಿಯೋಪೊರೋಸಿಸ್ ದಿನ (World Osteoporosis Day) ಮೂಳೆಗಳ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ದಿನ.

4)ಅಂತರರಾಷ್ಟ್ರೀಯ ವಾಯು ಸಂಚಾರ ನಿಯಂತ್ರಕರ ದಿನ (International Day of the Air Traffic Controller) ವಿಮಾನ ಸಂಚಾರದ ಸುರಕ್ಷತೆಯಲ್ಲಿ ತೊಡಗಿರುವವರನ್ನು ಗೌರವಿಸುವ ದಿನ.

5)ವಿಶ್ವ ಅಂಕಿಅಂಶಗಳ ದಿನ (World Statistics Day) ವಿಶ್ವಸಂಸ್ಥೆಯ ಈ ದಿನವನ್ನು ಪ್ರತಿ ಐದು ವರ್ಷಗಳಿಗೊಮ್ಮೆ ಆಚರಿಸಲಾಗುತ್ತದೆ; 2026ರಲ್ಲಿ ಇದು ಆಚರಣೆಯ ವರ್ಷವಲ್ಲ.

6)ಮಾಹಿತಿ ಮಿತಿಮೀರಿದ ಜಾಗೃತಿ ದಿನ (Information Overload Awareness Day) ಅತಿಯಾದ ಮಾಹಿತಿಯ ಬಳಕೆಯ ಬಗ್ಗೆ ಅರಿವು ಮೂಡಿಸುವ ದಿನ.

ಸುಭಾಷಿತ

ಹಂಗಿನರಮನೆಗಿಂತ ಅಂಗಡದ ಗುಡಿ
ಲೇಸು, ಭಂಗಪಟ್ಟು ಉಣ್ಣುವ ಬಿಸಿ
ಅನ್ನಕ್ಕಿಂತ ತಂಗಳು ಲೇಸು.

–ಸರ್ವಜ್ಞ

ರಾಜ್ಯದಲ್ಲಿ ಅಂತಿಮ ಹಂತ ತಲುಪಿದ SIR ಪ್ರಕ್ರಿಯೆ :

ಅ.27ಕ್ಕೆ ಅಂತಿಮ ಪಟ್ಟಿ ಪ್ರಕಟಣೆ

❑ ನೈಜ್ಯ ದೇಸೆ ನ್ಯೂಸ್


ಬೆಂಗಳೂರು: ಕರ್ನಾಟಕದಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (SIR) ಪ್ರಕ್ರಿಯೆ ಅಂತಿಮ ಹಂತ ತಲುಪಿದ್ದು, ಒಟ್ಟು 43.82 ಲಕ್ಷ ನೋಟೀಸ್‌ಗಳ ಪೈಕಿ 19,365 ನೋಟೀಸ್‌ಗಳ ಪರಿಶೀಲನೆ ಮಾತ್ರ ಬಾಕಿ ಉಳಿದಿದೆ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ತಿಳಿಸಿದೆ.

ಈವರೆಗೆ 43.63 ಲಕ್ಷ ವಿಚಾರಣೆಗಳನ್ನು ಪೂರ್ಣಗೊಳಿಸಲಾಗಿದೆ. ಹಕ್ಕುಗಳು ಮತ್ತು ಆಕ್ಷೇಪಣೆಗಳನ್ನು ಇತ್ಯರ್ಥಪಡಿಸಿ ನೋಟೀಸ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಅಕ್ಟೋಬರ್ 22 ಕೊನೆಯ ದಿನವಾಗಿದ್ದು, ಅಂತಿಮ ಮತದಾರರ ಪಟ್ಟಿಯನ್ನು ಅಕ್ಟೋಬರ್ 27 ರಂದು ಪ್ರಕಟಿಸಲು ನಿರ್ಧರಿಸಲಾಗಿದೆ.

ಮತದಾರರ ಪಟ್ಟಿಯ ಪರಿಷ್ಕರಣೆ ಚುನಾವಣಾ ಪ್ರಕ್ರಿಯೆಯ ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆಯ ದೃಷ್ಟಿಯಿಂದ ಮಹತ್ವ ಪಡೆದಿದೆ. ವಿಶೇಷವಾಗಿ ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡುವ ಪ್ರಕ್ರಿಯೆ, ಹೊಸ ಮತದಾರರ ಸೇರ್ಪಡೆ ಹಾಗೂ ವಿಳಾಸ ಬದಲಾವಣೆಯ ಅರ್ಜಿಗಳ ವಿಲೇವಾರಿ ಕುರಿತು ರಾಜಕೀಯ ವಲಯದಲ್ಲಿ ಚರ್ಚೆಗಳು ನಡೆಯುತ್ತಿರುವ ಸಂದರ್ಭದಲ್ಲಿ, ಅಂತಿಮ ಪಟ್ಟಿಯ ಪ್ರಕಟಣೆಗೆ ಮುನ್ನ ಬಾಕಿ ಉಳಿದಿರುವ ಪ್ರಕರಣಗಳನ್ನು ನ್ಯಾಯಸಮ್ಮತವಾಗಿ ಇತ್ಯರ್ಥಪಡಿಸುವುದು ಚುನಾವಣಾ ಆಯೋಗಕ್ಕೆ ಪ್ರಮುಖ ಸವಾಲಾಗಿದೆ.

24.46 ಲಕ್ಷಕ್ಕೂ ಹೆಚ್ಚು ಅರ್ಜಿಗಳ ಸ್ವೀಕಾರ: ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಡಿ ಒಟ್ಟು 24,46,803 ಅರ್ಜಿ ನಮೂನೆಗಳು ಸ್ವೀಕೃತವಾಗಿವೆ. ಅವುಗಳ ವಿವರ ಹೀಗಿದೆ:

ನಮೂನೆ-6 (ಹೊಸ ಮತದಾರರ ಹೆಸರು ಸೇರ್ಪಡೆ): 10,07,392 ಅರ್ಜಿಗಳು ನಮೂನೆ-6ಎ (ಅನಿವಾಸಿ ಭಾರತೀಯ ಮತದಾರರ ನೋಂದಣಿ): 4,777 ಅರ್ಜಿಗಳು ನಮೂನೆ-7 (ಮತದಾರರ ಪಟ್ಟಿಯಿಂದ



ಹೆಸರು ತೆಗೆದುಹಾಕಲು): 1,55,109 ಅರ್ಜಿಗಳು ನಮೂನೆ-8 (ವಿಳಾಸ ಬದಲಾವಣೆ ಹಾಗೂ ವಿವರ ತಿದ್ದುಪಡಿ): 12,79,525 ಅರ್ಜಿಗಳು ಈ ಪೈಕಿ ನಮೂನೆ-8ರ ಅರ್ಜಿಗಳ ಸಂಖ್ಯೆ ಅತಿ ಹೆಚ್ಚಿದೆ. ಹೊಸ ಮತದಾರರ ನೋಂದಣಿಗೆ ಸಂಬಂಧಿಸಿದ ನಮೂನೆ-6ರ ಅರ್ಜಿಗಳ ಸಂಖ್ಯೆಯೂ ಗಮನಾರ್ಹವಾಗಿದೆ.

ಸಾಮೂಹಿಕ ಅರ್ಜಿಗಳ ಸಲ್ಲಿಕೆಗೆ ನಿರ್ಬಂಧ: ಮತದಾರರ ಹೆಸರುಗಳನ್ನು ಸಾಮೂಹಿಕವಾಗಿ ಅಳಿಸಲು ನಮೂನೆ-7 ಅರ್ಜಿಗಳನ್ನು ದೊಡ್ಡ ಪ್ರಮಾಣದಲ್ಲಿ ಸಲ್ಲಿಸಲಾಗುತ್ತಿದೆ ಎಂಬ ಆರೋಪಗಳು ಕೇಳಿಬಂದ ಹಿನ್ನೆಲೆಯಲ್ಲಿ, ಚುನಾವಣಾ ಆಯೋಗವು ಅರ್ಜಿ ಸಲ್ಲಿಕೆಯ ನಿಯಮಗಳನ್ನು ಸ್ಪಷ್ಟಪಡಿಸಿದೆ.

ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಬೂತ್ ಮಟ್ಟದ ಏಜೆಂಟರು, ಕರಡು ಮತದಾರರ ಪಟ್ಟಿ ಪ್ರಕಟಿಸುವ ಮೊದಲು ಬೂತ್ ಮಟ್ಟದ ಅಧಿಕಾರಿಗಳಿಗೆ ದಿನಕ್ಕೆ ಗರಿಷ್ಠ 50 ಅರ್ಜಿಗಳನ್ನು ಸಲ್ಲಿಸಬಹುದು. ಕರಡು ಪಟ್ಟಿ ಪ್ರಕಟವಾದ ನಂತರ ಈ ಮಿತಿ ದಿನಕ್ಕೆ 10 ಅರ್ಜಿಗಳಾಗಿರುತ್ತದೆ. ವೈಯಕ್ತಿಕ ಮತದಾರರು ಸಲ್ಲಿಸುವ ನಮೂನೆ-7 ಅರ್ಜಿಗಳಿಗೂ ಆನ್‌ಲೈನ್ ಮತ್ತು ಆಫ್‌ಲೈನ್ ಎರಡೂ ವಿಧಾನಗಳಲ್ಲಿ ಮಿತಿ ನಿಗದಿಪಡಿಸಲಾಗಿದೆ. ಹಕ್ಕುಗಳು ಮತ್ತು ಆಕ್ಷೇಪಣೆಗಳ ಅವಧಿಯಲ್ಲಿ ಒಬ್ಬ ಮತದಾರರು ಗರಿಷ್ಠ 10 ಅರ್ಜಿಗಳನ್ನು ಸಲ್ಲಿಸಬಹುದು. ನಿರಂತರ ಮತದಾರರ ಪಟ್ಟಿ ನವೀಕರಣದ ಅವಧಿಯಲ್ಲಿ ತಿಂಗಳಿಗೆ ಗರಿಷ್ಠ 5 ಅರ್ಜಿಗಳನ್ನು ಸಲ್ಲಿಸಲು ಅವಕಾಶವಿದೆ. ಈ ಕ್ರಮವು ಆಧಾರರಹಿತ ಅಥವಾ ಪುನರಾವರ್ತಿತ ಆಕ್ಷೇಪಣೆಗಳನ್ನು ನಿಯಂತ್ರಿಸುವ ಉದ್ದೇಶ ಹೊಂದಿದ್ದರೂ, ನಿಜವಾದ ದೂರುಗಳನ್ನು ಸಲ್ಲಿಸುವ ಅರ್ಹ ಮತದಾರರ ಹಕ್ಕುಗಳಿಗೆ ಧಕ್ಕೆಯಾಗದಂತೆ ಅನುಷ್ಠಾನಗೊಳಿಸುವುದು ಮುಖ್ಯವಾಗಿದೆ.

ಪಾಲಿಸಬೇಕಾದ ನಿಯಮಗಳು: ಮತದಾರರ ನೋಂದಣಿ ನಿಯಮಗಳು, 1960ರ ಪ್ರಕಾರ, ನಮೂನೆ-7ರಲ್ಲಿ ಸಲ್ಲಿಸಲಾದ ಆಕ್ಷೇಪಣೆಗಳನ್ನು ಪರಿಶೀಲಿಸುವ ಜವಾಬ್ದಾರಿ ಚುನಾವಣಾ ನೋಂದಣಿ ಅಧಿಕಾರಿಗಳ ಮೇಲಿದೆ. ಅರ್ಜಿಯಲ್ಲಿ ಅಗತ್ಯ ವಿವರಗಳಿವೆಯೇ, ಆಕ್ಷೇಪಣೆ ಸಲ್ಲಿಸಿದ ವ್ಯಕ್ತಿಯ ಸಹಿ ಇದೆಯೇ ಹಾಗೂ ನೀಡಿರುವ ಮಾಹಿತಿಯು ಮತದಾರರ ಪಟ್ಟಿಯಲ್ಲಿರುವ ವಿವರಗಳಿಗೆ ಹೊಂದಿಕೆಯಾಗುತ್ತದೆಯೇ ಎಂಬುದನ್ನು ಅಧಿಕಾರಿಗಳು ಪರಿಶೀಲಿಸಬೇಕು. ನಿಯಮಾನುಸಾರ ಇತ್ಯರ್ಥಪಡಿಸಲಾಗದ ಪ್ರಕರಣಗಳಲ್ಲಿ ಸಂಬಂಧಪಟ್ಟವರಿಗೆ ನೋಟೀಸ್ ನೀಡಿ, ಹೇಳಿಕೆಗಳನ್ನು ದಾಖಲಿಸಿಕೊಂಡು ವಿಚಾರಣೆ ನಡೆಸಬೇಕು.

ಯಾರ ಹೆಸರಿನ ವಿರುದ್ಧ ಆಕ್ಷೇಪಣೆ ಸಲ್ಲಿಸಲಾಗಿದೆಯೋ, ಆ ಮತದಾರರಿಗೂ ತಮ್ಮ ವಾದವನ್ನು ಮಂಡಿಸಲು ಅವಕಾಶ ನೀಡಬೇಕು. ವಿಚಾರಣೆ ಮತ್ತು ಪರಿಶೀಲನೆಯ ನಂತರವೇ ನಿಯಮಾನುಸಾರ ಅಂತಿಮ ನಿರ್ಧಾರ ಕೈಗೊಳ್ಳಬೇಕು. ಸುಳ್ಳು ಮಾಹಿತಿ ಅಥವಾ ಸುಳ್ಳು ಹಕ್ಕುಗಳನ್ನು ಉದ್ದೇಶಪೂರ್ವಕವಾಗಿ ಸಲ್ಲಿಸಿದ ಪ್ರಕರಣಗಳಲ್ಲಿ ಜನತಾ ಪ್ರಾತಿನಿಧ್ಯ ಕಾಯಿದೆ, 1950ರ ಸೆಕ್ಷನ್ 31ರ ಅಡಿಯಲ್ಲಿ ಕಾನೂನು ಕ್ರಮ ಕೈಗೊಳ್ಳಲು ಅವಕಾಶವಿದೆ.

ಹಿಂದಿನ ವಿವಾದಗಳ ಹಿನ್ನೆಲೆ: ರಾಜ್ಯದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ಈ ಹಿಂದೆಯೂ ರಾಜಕೀಯ ಆರೋಪ-ಪ್ರತ್ಯಾರೋಪಗಳು ಕೇಳಿಬಂದಿದ್ದವು. ವಿಶೇಷವಾಗಿ ನಮೂನೆ-7 ಬಳಸಿ ದೊಡ್ಡ ಪ್ರಮಾಣದಲ್ಲಿ ಮತದಾರರ ಹೆಸರುಗಳನ್ನು ಅಳಿಸುವ ಪ್ರಯತ್ನ ನಡೆಯುತ್ತಿದೆ ಎಂಬ ಆರೋಪಗಳು ವಿವಾದಕ್ಕೆ ಕಾರಣವಾಗಿದ್ದವು. ಈ ಹಿನ್ನೆಲೆಯಲ್ಲಿ ಅರ್ಜಿಗಳ ಸಂಖ್ಯೆಗೆ ಮಿತಿ ವಿಧಿಸುವುದು ಹಾಗೂ ಪ್ರತಿಯೊಂದು ಆಕ್ಷೇಪಣೆಯನ್ನೂ ಪರಿಶೀಲಿಸಿ ನಿರ್ಧಾರ ಕೈಗೊಳ್ಳುವುದು ಮಹತ್ವ ಪಡೆದಿದೆ.

ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯ ಕುರಿತು ದೇಶದ ವಿವಿಧ ಭಾಗಗಳಲ್ಲಿಯೂ ಮತದಾರರ ಹಕ್ಕುಗಳು, ದಾಖಲೆಗಳ ಪರಿಶೀಲನೆ, ಹೆಸರುಗಳ ಸೇರ್ಪಡೆ ಮತ್ತು ಅಳಿಸುವಿಕೆ ಹಾಗೂ ಚುನಾವಣಾ ಪಟ್ಟಿಗಳ ವಿಶ್ವಾಸಾರ್ಹತೆಯ ಕುರಿತು ಚರ್ಚೆಗಳು ನಡೆದಿವೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಅಂತಿಮ ಮತದಾರರ ಪಟ್ಟಿ ಕೇವಲ ಆಡಳಿತಾತ್ಮಕ ದಾಖಲೆಯಲ್ಲ; ಅದು ಅರ್ಹ ನಾಗರಿಕರ ಮತದಾನದ ಹಕ್ಕನ್ನು ಖಚಿತಪಡಿಸುವ ಪ್ರಮುಖ ಆಧಾರವಾಗಿದೆ.

ಡಾ. ಬಿ.ಆರ್. ಅಂಬೇಡ್ಕರ್ ಅವರ ದೀಕ್ಷಾಭೂಮಿ ಯಾತ್ರೆಗೆ ಚಾಲನೆ ನೀಡಿದ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ

❑ ನೈಜ್ಯ ದೇಸೆ ನ್ಯೂಸ್

ಮಾನ್ವಿ: ಪಟ್ಟಣದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ದೀಕ್ಷಾಭೂಮಿ ಯಾತ್ರೆಗೆ ಹೋರಾಟ ಬಸ್‌ಗೆ ಸಮಾಜ ಕಲ್ಯಾಣ ಇಲಾಖೆ ತಾಲೂಕು ಸಹಾಯಕ ನಿರ್ದೇಶಕರಾದ ಸಾಹಿರಬಾನು ನದಾಫ್ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿ ಮಾತನಾಡಿ ಭಾರತ ರತ್ನ,

ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಬೌದ್ಧ ಧರ್ಮವನ್ನು ಸ್ವೀಕರಿಸಿದ ಐತಿಹಾಸಿಕ ದೀಕ್ಷಾಭೂಮಿಯ ಮಹತ್ವವನ್ನು ಜನರಿಗೆ ತಿಳಿಸುವುದು ಹಾಗೂ ಅವರ ಸಮಾನತೆ, ಸ್ವಾತಂತ್ರ?ಯ, ಸಹೋದರತೆ ಮತ್ತು ಸಾಮಾಜಿಕ ನ್ಯಾಯದ ಸಂದೇಶವನ್ನು ಸಮಾಜದ ಪ್ರತಿಯೊಬ್ಬರಿಗೂ ತಲುಪಿಸುವ ಉದ್ದೇಶದಿಂದ ಸಮಾಜ ಕಲ್ಯಾಣ ಇಲಾಖೆಯಿಂದ ದೀಕ್ಷಾಭೂಮಿ ಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.



ಪ್ರಗತಿಪರ ಸಂಘಟನೆಯ ಮುಖಂಡರಾದ ಕಾಶಿನಾಥ ಕುರ್ಡಿ ಮಾತನಾಡಿ ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಗಳು, ಸಂವಿಧಾನದ ಆಶಯಗಳು ಹಾಗೂ ಸಮಾನತೆಯ ಸಂದೇಶವನ್ನು ಜನಸಾಮಾನ್ಯರಲ್ಲಿ ಜಾಗೃತಿಗೊಳಿಸುವ ನಿಟ್ಟಿನಲ್ಲಿ ಈ ಯಾತ್ರೆ ಮಹತ್ವ ಪಡೆದಿದೆ. ಅಂಬೇಡ್ಕರ್ ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡು, ಜಾತಿ-ಭೇದವಿಲ್ಲದ ಸಮಾನತೆಯ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದು ತಿಳಿಸಿದರು.

ರಾಮಲಿಂಗಪ್ಪ. ತಾಲೂಕಿನ ವಿವಿಧ ಸಂಘಟನೆಗಳ ಪದಾಧಿಕಾರಿಗಳಾದ ಅಂಬರೀಶ್ ನಂದಿಹಾಳ, ತಾಯಣ್ಣ ಕಪಗಲ್, ನರಸಿಂಲು ಸೀಕಲ್, ಹುಸೇನಪ್ಪ ನಂದಿಹಾಳ, ಬಸವರಾಜ್ ಬಾಗಲವಾಡ, ಲಿಂಗರಾಜ್ ಸೇರಿದಂತೆ ಇನ್ನಿತರರು ಇದ್ದರು.

ಭವಿಷ್ಯದಲ್ಲಿ ಅಮೆರಿಕ ಉಲ್ಟಾ ಹೊಡೆಯುವ ಭಯ : ಭಾರತದೊಂದಿಗೆ ಮೈತ್ರಿಗೆ ಮುಂದಾದ ನೆತನ್ಯಾಹು

❑ ನೈಜ್ಯ ದೇಸೆ ನ್ಯೂಸ್

ಜೆರುಸಲೇಮ್: ಭವಿಷ್ಯದಲ್ಲಿ ಅಮೆರಿಕದ ಅಧ್ಯಕ್ಷರಾಗಿ ಬರುವವರು ಇಸ್ರೇಲ್‌ನೊಂದಿಗೆ ವೈರತ್ವ ಹೊಂದಿರಬಹುದು ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಎಚ್ಚರಿಸಿದ್ದಾರೆ. ತಮ್ಮ ದೇಶದ ಸ್ಥಾನವನ್ನು ಬಲಪಡಿಸಿಕೊಳ್ಳಲು ಭಾರತ ಮತ್ತು ಲ್ಯಾಟಿನ್ ಅಮೆರಿಕದ ದೇಶಗಳೊಂದಿಗೆ ಹೊಸ ಮೈತ್ರಿಗಳನ್ನು ಮಾಡಿಕೊಳ್ಳುವ ಅಗತ್ಯವಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.ನಕ್ಷೆಗಳನ್ನು ನೋಡಿ '

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ನೆತನ್ಯಾಹು ಅವರ ಮರುಚುನಾವಣಾ ಪ್ರಯತ್ನಕ್ಕೆ ಬಹಿರಂಗವಾಗಿ ಬೆಂಬಲ ಸೂಚಿಸಿದ ಕೆಲವೇ ಗಂಟೆಗಳ ನಂತರ ಈ ಹೇಳಿಕೆಗಳು ಹೊರಬಿದ್ದಿವೆ. "ಎರಡು ವರ್ಷಗಳಲ್ಲಿ, ಇಸ್ರೇಲ್‌ನೊಂದಿಗೆ ತೀವ್ರ ವೈರತ್ವ ಹೊಂದಿರುವ ವ್ಯಕ್ತಿಯೊಬ್ಬರು (ಪುರುಷ ಅಥವಾ ಮಹಿಳೆ) ಅಮೆರಿಕದ ಅಧ್ಯಕ್ಷರಾಗಿ ಅಧಿಕಾರಕ್ಕೆ ಬರಬಹುದು," ಎಂದು ನೆತನ್ಯಾಹು ಹೇಳಿದರು. "ಅಂತಹ ಪರಿಸ್ಥಿತಿಯನ್ನು ನೀವು ಹೇಗೆ



ನಿಭಾಯಿಸುತ್ತೀರಿ ಅಮೆರಿಕದೊಂದಿಗೆ ನಿಮ್ಮ ಸಂಬಂಧ ಹೇಗಿರುತ್ತದೆ ಮತ್ತು ಅದರಾಚೆಗೆ, ಯಾವ ಪರಿಹಾರಗಳು ಅಗತ್ಯವಾಗುತ್ತವೆ?" ಎಂದು ಅವರು ಪ್ರಶ್ನಿಸಿದರು.

ಅಮೆರಿಕದ ನೀತಿಯಲ್ಲಿ ನಾಟಕೀಯ ಬದಲಾವಣೆ ಉಂಟಾಗುವ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡು, ಟ್ರಂಪ್ ಅವರ ಅಧ್ಯಕ್ಷೀಯ ಅವಧಿಯ ಉಳಿದ ವರ್ಷಗಳನ್ನು ತಮ್ಮ ದೇಶದ ಸ್ಥಾನವನ್ನು ಬಲಪಡಿಸಿಕೊಳ್ಳಲು ಇಸ್ರೇಲ್ ಬಳಸಿಕೊಳ್ಳಬೇಕು ಎಂದು ಇಸ್ರೇಲ್ ಪ್ರಧಾನಿ ಒತ್ತಿ ಹೇಳಿದರು. "ಮೊದಲನೆಯದಾಗಿ, ಈ ಎರಡು ವರ್ಷಗಳಲ್ಲಿ ಮತ್ತು ಮುಂದಿನ ಎರಡು ವರ್ಷಗಳಲ್ಲಿ, ಅಮೆರಿಕದ ರಂಗದಲ್ಲಿ ? ಒಳ್ಳೆಯ ಅಥವಾ ಕೆಟ್ಟ ಕಾಲವಿರಲಿ ? ನಾವು ಸಾಧ್ಯವಾದಷ್ಟು ಎಲ್ಲವನ್ನೂ ಮಾಡಬೇಕು," ಎಂದು ಅವರು ಹೇಳಿದರು. "ಎರಡನೆಯದಾಗಿ, ಇತರ ಮೈತ್ರಿಗಳನ್ನು ರೂಪಿಸಿಕೊಳ್ಳಬೇಕು. ಇದಕ್ಕಾಗಿ ನಾನು ಈಗ ನಮ್ಮ ಪ್ರದೇಶದ ಮತ್ತು ಹೊರಗಿನ ಅನೇಕ ದೇಶಗಳೊಂದಿಗೆ ಕೆಲಸ ಮಾಡುತ್ತಿದ್ದೇನೆ. ಭಾರತವು ಸಣ್ಣ ದೇಶವೇನಲ್ಲ, ಮತ್ತು ಇನ್ನೂ ಅನೇಕ ದೇಶಗಳಿವೆ," ಎಂದು ಇಸ್ರೇಲ್ ಪ್ರಧಾನಿ ಒತ್ತಿ ಹೇಳಿದರು.

ಇಸ್ರೇಲ್‌ನ ಮಿತ್ರರಾಷ್ಟ್ರಗಳ ಜಾಲವನ್ನು ವಿಸ್ತರಿಸಲು ಲ್ಯಾಟಿನ್ ಅಮೆರಿಕದಲ್ಲಿ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳು ಮತ್ತೊಂದು ಅವಕಾಶ ಎಂದು ಅವರು ಉಲ್ಲೇಖಿಸಿದರು. "ಲ್ಯಾಟಿನ್ ಅಮೆರಿಕದಲ್ಲಿ ದೊಡ್ಡ ಬದಲಾವಣೆಯಾಗುತ್ತಿದೆ, ಮತ್ತು ಕೆಲವೇ ದಿನಗಳಲ್ಲಿ ಬ್ರೆಜಿಲ್‌ನಲ್ಲಿಯೂ ಭಾರೀ ಬದಲಾವಣೆ ಸಂಭವಿಸಬಹುದು," ಎಂದು ನೆತನ್ಯಾಹು ಗಮನಸೆಳೆದರು. "ನಾವು ನಮ್ಮ ಮೈತ್ರಿಕೂಟಗಳನ್ನು ವಿಸ್ತರಿಸಿಕೊಳ್ಳಬೇಕು ಮತ್ತು ಎಲ್ಲರಿಗೂ ಉಪಯುಕ್ತವಾಗುವಂತಹ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಬೇಕು," ಎಂದು ಅವರು ಹೇಳಿದರು.

ಜನವರಿ 15ರವರೆಗೆ ಕಾಲುವೆಗಳಿಗೆ ನೀರು ಹರಿಸುವಂತೆ ಹಸಿರು ಸೇನೆ ಒತ್ತಾಯ

❑ ನೈಜ್ಯ ದೇಸೆ ನ್ಯೂಸ್

ಲಿಂಗಸಗೂರು: ನಾರಾಯಣಪೂರು ಬಲಂದಡೆ ಹಾಗೂ ರಾಂಪೂರು ಏತ ನೀರಾವರಿ ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆದಿರುವ ಬೆಳೆಗಳು ಸಂಪೂರ್ಣವಾಗಿ ಕೈಗೆ ಬರಬೇಕಾದರೆ ಜನವರಿ 15ರವರೆಗೆ ನಾರಾಯಣಪೂರ ಬಲದಂಡೆ ಹಾಗೂ ರಾಂಪೂರ ಏತ ನೀರಾವರಿ ಕಾಲುವೆಗಳಿಗೆ ನಿರಂತರವಾಗಿ ನೀರು ಹರಿಸುವುದು ಅತ್ಯವಶ್ಯಕವಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ತಾಲೂಕ ಅಧ್ಯಕ್ಷ ದುರ್ಗಾ ಪ್ರಸಾದ್ ಸಹಾಯಕ ಆಯುಕ್ತರ ಮೂಲಕ ನೀರಾವರಿ ಸಚಿವರಿಗೆ ಮನವಿಯನ್ನು ಸಲ್ಲಿಸಿದರು .

15 ಅಕ್ಟೋಬರ್ 2026ರಂದು ನಡೆದ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ನವೆಂಬರ್ 12ರವರೆಗೆ ಮಾತ್ರ ಕಾಲುವೆಗಳಿಗೆ ನೀರು ಹರಿಸುವುದಾಗಿ ನಿರ್ಣಯಿಸಿರುವುದು ರೈತರಲ್ಲಿ ಆತಂಕ ಮೂಡಿಸಿದೆ. ನವೆಂಬರ್ 12ಕ್ಕೆ ನೀರು ಸ್ಥಗಿತಗೊಳಿಸಿದರೆ ಈಗಾಗಲೇ ಬೆಳೆದಿರುವ ಬೆಳೆಗಳು ಕಾಳುಕಟ್ಟುವ ಹಾಗೂ ಫಸಲು ಬರುವ ಹಂತಕ್ಕೆ ತಲುಪದೆ ಒಣಗಿ ಹೋಗುವ ಸಾಧ್ಯತೆ ಇದೆ. ಇದರಿಂದ ರೈತರು ಬೆಳೆ ಕೈಗೆ ಬಾರದೆ ಭಾರಿ ನಷ್ಟ ಅನುಭವಿಸುವ ಪರಿಸ್ಥಿತಿ ನಿರ್ಮಾಣವಾಗಲಿದೆ.





ಜಲಾಶಯದಲ್ಲಿ ನೀರಿನ ಲಭ್ಯತೆಗೆ ಅನುಗುಣವಾಗಿ ಡಿಸೆಂಬರ್ 1 ರ ವರೆಗೆ ಕಾಲುವೆಗಳಿಗೆ ವಾರಬಂಧಿಯ ಪ್ರಕಾರ ಕಾಲುವೆಗಳಿಗೆ ನೀರು ಹರಿಸಬೇಕು, ನಂತರ ಜನವರಿ 15ರ ವರೆಗೆ ಗೇಜ್‌ಗಳನ್ನು ಪರಿವರ್ತಿಸಿ ಕಾಲುವೆಗಳಿಗೆ ನೀರು ಹರಿಸಿದರೆ ಹತ್ತಿ, ಮೆಣಸಿನಕಾಯಿ ಹಾಗೂ ಇತರ ಬೆಳೆಗಳಿಗೆ ಕೈಗೆ ಬರಲು ಸಾಧ್ಯವಾಗುತ್ತದೆ. ಇಲ್ಲವಾದರೆ ಬೆಳಗಳು ಕೈಗೆಬಾರದೆ ರೈತ ನಷ್ಟ ಅನುಭವಿಸುತ್ತಾನೆ. ಈಗಾಗಲೇ ಸಾಲಸೋಲ ಮಾಡಿ ಬೆಳೆಗಳನ್ನು ಬೆಳೆದ ರೈತರು ನಷ್ಟ ಅನುಭವಿಸಿದರೆ ಸಾಲ ತೀರಿಸಲಾಗದೆ ರೈತರು ಆತ್ಮಹತ್ಯೆಗೆ ಶರಣಾಗುವ ಪರಿಸ್ಥಿತಿಗೆ ರಾಜ್ಯ ಸರ್ಕಾರವೇ ಹೊಣೆಗಾರವಾಗುತ್ತದೆ. ಕಾರಣ ರೈತರ ನಷ್ಟವನ್ನು ತಪ್ಪಿಸಲು ಹಾಗೂ ರೈತರ ಹಿತದೃಷ್ಟಿಯಿಂದ ನವೆಂಬರ್ 12ರ ಬದಲಿಗೆ ಜನವರಿ 15ರವರೆಗೆ ಕಾಲುವೆಗಳಿಗೆ ನೀರು ಹರಿಸಲು ಸರ್ಕಾರ ಹಾಗೂ ನೀರಾವರಿ ಇಲಾಖೆ ತಕ್ಷಣ ಕ್ರಮ ಕೈಗೊಳ್ಳಬೇಕು. ನವಂಬರ್ 5ರ ಒಳಗಾಗಿ ಸರ್ಕಾರ ನಿರ್ಧಾರ ಬದಲಾಯಿಸದಿದ್ದರೆ ಗುರುಗುಂಟಾ ದಿಂದ ಬಸವಸಾಗರ ಕ್ರಾಸ್‌ನವರೆಗೆ ಪಾದಯಾತ್ರೆ ನಡೆಸಿ ನೀರು ಹರಿಸುವ ವರೆಗೆ ನಿರಂತರ ಉಗ್ರ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಒತ್ತಾಯಿಸಿದರು .

ಈ ಸಂದರ್ಭದಲ್ಲಿ ಬಸವರಾಜ ಅಂಗಡಿ , ಮಹ್ಮದ್ ಸಾಬ , ಕರಿಯಪ್ಪ , ರಾಮಣ್ಣ ಅಡಿಕೇರ , ನಾಗಪ್ಪ ಪೋಣೆದ್ , ರಾಮಣ್ಣ ಗೌಡೂರು , ಸೋಮರೆಡ್ಡಿ , ಅಮರಯ್ಯ ಗುಡದನಾಳ , ನಾಗಪ್ಪ ಹನುಮಂತ ಹಳ್ಳಿ , ಆದಪ್ಪ , ದುರಗಪ್ಪ ಗೌಡೂರು , ಹುಲಗಪ್ಪ ದೊಡ್ಡಿ , ರಂಗಪ್ಪ , ಹುಲಗಪ್ಪ ನಾಯಕ , ಭೀಮಪ್ಪ ಹೋಳೆಪ್ಪ , ಇಮಾಮ್ ಸಾಬ್ , ಶರಣಪ್ಪ ಗುಡದನಾಳ , ಸಿದ್ದು ಗೌಡೂರು , ವೀರಭದ್ರ , ಹುಲಗಪ್ಪ ದೊಡ್ಡಿ , ಶಿವನಗೌಡ , ಸಿದ್ದು ಕರಿಕುರಿ , ಬಸವರಾಜ ನಾಯಕ, ಅಮರೇಶ ಭೂಪೂರು , ಬಸವರಾಜ ಪೂಜಾರಿ , ಬಸವರಾಜ , ನಿತೀಶಕುಮಾರ್ , ಹನುಮಂತಹಳ್ಳಿ , ಮುದಿಯಪ್ಪ , ಬಾಸ್ಕರ್ , ಕಿರಣಕುಮಾರ್ , ಶ್ರೀನಿವಾಸ , ಭೀಮಣ್ಣ , ರೆಡ್ಡಿಪ್ಪ , ಹನುಮಂತರಾಯ , ಶೀಲವಂತ , ಖಾದರಸಾಬ , ಹಿಮಾಮ್ ಸಾಬ್ , ಬಸವರಾಜ , ನಾಗರಾಜ ಹವಾಲ್ದಾರ್ , ಅಭಯ್ ನಾಯಕ , ವೆಂಕಟೇಶ , ಶಿವಾನಂದ , ಅಮರಪ್ಪ , ಶಾಮೀದ್‌ಅಲಿ , ಕನಕಪ್ಪ ಅಡಿಕೇರ್ , ಕರಿಯಪ್ಪ , ಭಾಷಾಸಾಬ ಸೇರಿದಂತೆ ಇತರರು ಇದ್ದರು .

ಸಾಹಿತ್ಯ ಸಿಂಚನ

ಕಣ್ಣೀರಿನ ಅಕ್ಷರಗಳು

ಕಣ್ಣೀರಿನ ಹನಿಯಲ್ಲಿ ಅಕ್ಷರಗಳು ಮೂಡಿದವು,
ಮೌನದ ಪುಟದಲ್ಲಿ ನೋವುಗಳು ಬರೆದವು.
ಹೇಳಲಾಗದ ಮಾತುಗಳು ಕಣ್ಣಲ್ಲಿ ಉಳಿದವು,
ಹೃದಯದ ಭಾವನೆಗಳು ಹನಿಯಾಗಿ ಹರಿದವು.

ನಗುವಿನ ಹಿಂದೆ ಅಡಗಿತ್ತು ನೋವಿನ ಕಥೆ,
ಮೌನದ ಹಿಂದೆ ಮಲಗಿತ್ತು ನೆನಪಿನ ಜೊತೆ.
ಮನದಾಳದ ಗಾಯಗಳಿಗೆ ಮಾತೇ ಇರಲಿಲ್ಲ,
ಕಣ್ಣೀರಿನ ಭಾಷೆಗೆ ಪದಗಳೇ ಬೇಕಿರಲಿಲ್ಲ.

ಕನಸುಗಳ ಹಾದಿಯಲ್ಲಿ ಮುಳ್ಳುಗಳು ಸಿಕ್ಕವು,
ನಂಬಿಕೆಯ ಹೂವುಗಳು ನಿಧಾನವಾಗಿ ಬಾಡಿದವು.
ಜೊತೆಯಾಗಿ ನಡೆದವರು ದೂರ ಸರಿದಾಗ,
ಒಂಟಿತನದ ನೆರಳು ಮನದಲಿ ಮೂಡಿತು ಆಗ.

ಕಳೆದುಹೋದ ಕ್ಷಣಗಳು ಕಣ್ಣ ಮುಂದೆ ಬಂದವು,
ಮರೆಯಲಾಗದ ನೆನಪುಗಳು ಹೃದಯವ ತಟ್ಟಿದವು.
ಪ್ರತಿ ಹನಿಯಲ್ಲೂ ಒಂದು ಕಥೆಯಿತ್ತು,
ಪ್ರತಿ ನೋವಿನಲ್ಲೂ ಹೊಸ ಪಾಠವಿತ್ತು.

ಕಣ್ಣೀರು ದುರ್ಬಲತೆಯ ಸಂಕೇತವಲ್ಲ,
ಅದು ಮನದಾಳದ ಭಾವನೆಗಳ ಮೌನದ ಬಲ.
ನೋವಿನ ಪುಟಗಳಲ್ಲೂ ನಾಳೆಯ ಬೆಳಕಿದೆ,
ಕಣ್ಣೀರಿನ ಅಕ್ಷರಗಳಲ್ಲೂ ಬದುಕಿನ ಭರವಸೆಯಿದೆ.

ಬೆಳೆ ವಿಮೆ ತುಂಬಿದ ರೈತರಿಗೆ ಮಧ್ಯಂತರ ವಿಮೆ ಹಣ ಬಿಡುಗಡೆಗೆ ಕನ್ನಡಪರ ಹೋರಾಟಗಾರರ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ಬರಗಾಲದಿಂದ ಸಂಕಷ್ಟದಲ್ಲಿರುವ ರೈತರಿಗೆ ತಕ್ಷಣ ಮಧ್ಯಂತರ ಬೆಳೆ ವಿಮೆ ಪರಿಹಾರ ಬಿಡುಗಡೆ ಮಾಡಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆಯ ಕನ್ನಡಪರ ಹೋರಾಟಗಾರರು ಒತ್ತಾಯಿಸಿದ್ದಾರೆ. ಕುಷ್ಟಗಿ ತಾಲೂಕನ್ನು ಸರ್ಕಾರ ಬರಪೀಡಿತ ತಾಲೂಕು ಎಂದು ಘೋಷಿಸಿದ್ದು, ರಾಜ್ಯ ಹಾಗೂ ಕೇಂದ್ರ ಸರ್ಕಾರದ ಅಧಿಕಾರಿಗಳ ತಂಡವು ಬೆಳೆ ಹಾನಿ ಕುರಿತು ಮಾಹಿತಿ ಸಂಗ್ರಹಿಸಿದೆ.



ಆದರೂ ಬೆಳೆ ವಿಮೆ ತುಂಬಿದ ರೈತರಿಗೆ ಮಧ್ಯಂತರ ಬೆಳೆ ವಿಮೆಯ ಹಣ ಬಿಡುಗಡೆಯಾಗದಿರುವುದು ರೈತರಲ್ಲಿ ಆತಂಕ ಮೂಡಿಸಿದೆ. ಈಗಾಗಲೇ ಮಳೆಯ ಕೊರತೆಯಿಂದ ಬೆಳೆಗಳು ಹಾನಿಗೀಡಾಗಿ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೃಷಿಗಾಗಿ ಸಾಲ ಮಾಡಿ ಬೆಳೆ ಬೆಳೆದ ರೈತರು ಪರಿಹಾರದ ನಿರೀಕ್ಷೆಯಲ್ಲಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಕೃಷಿ ಇಲಾಖೆ ಅಧಿಕಾರಿಗಳು ಹಾಗೂ ವಿಮಾ ಕಂಪನಿಯ ಅಧಿಕಾರಿಗಳೊಂದಿಗೆ ಚರ್ಚಿಸಿ, ಅರ್ಹ ರೈತರಿಗೆ ತಕ್ಷಣ ಮಧ್ಯಂತರ ಬೆಳೆ ವಿಮೆ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆಯ ಕನ್ನಡಪರ ಹೋರಾಟದ ಜಿಲ್ಲಾ ಅಧ್ಯಕ್ಷರಾದ ಮಲ್ಲಿಕಾರ್ಜುನ ಬಿ. ಬಂಡೇರ ಅವರು ಸಹಾಯಕ ಕೃಷಿ ನಿರ್ದೇಶಕರಿಗೆ ಮನವಿ ಪತ್ರ ಸಲ್ಲಿಸುವ ಮೂಲಕ ಒತ್ತಾಯಿಸಿದರು. ಈ ಸಂದರ್ಭದಲ್ಲಿ ವೀರಭದ್ರಪ್ಪ ಸಂಗಟಿ, ಶಿವಪುತ್ರಪ್ಪ ಗುರಿಕಾರ, ತಿಮ್ಮಣ್ಣ ಕುರ್ನಾಳ, ರಾಜಶೇಖರ ಹಾಗೂ ಕೃಷಿ ಇಲಾಖೆಯ ತಾಂತ್ರಿಕ ಅಧಿಕಾರಿ ಪ್ರಕಾಶ ತಾರಿವಾಳ ಸೇರಿದಂತೆ ಇತರ ಸಿಬ್ಬಂದಿ ಉಪಸ್ಥಿತರಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ಅಂಬೇಡ್ಕರ್ ಸ್ವಾಭಿಮಾನಿ ಸೇನೆ ಸಿಂಧನೂರು ತಾಲ್ಲೂಕು ಅಧ್ಯಕ್ಷರಾಗಿ ಆಯುಷ್ಮಾನ್ ನಿರುಪದಿ ನೇಮಕ

ಸಂಘಟನೆಯ ಸಮಾಜಮುಖಿ ಹೋರಾಟಗಳನ್ನು ಬಲಪಡಿಸುವ ಜವಾಬ್ದಾರಿ; ಜಿಲ್ಲಾಧ್ಯಕ್ಷ ಮಲ್ಲಪ್ಪ ಗೌಡೂರು ಅವರಿಂದ ನೇಮಕಾತಿ ಆದೇಶ

❑ ನೈಜ್ಯ ದೆಸೆ ನ್ಯೂಸ್

ರಾಯಚೂರು: ಅಂಬೇಡ್ಕರ್ ಸ್ವಾಭಿಮಾನಿ ಸೇನೆಯ ರಾಯಚೂರು ಜಿಲ್ಲಾ ಸಮಿತಿಯ ವತಿಯಿಂದ ಸಿಂಧನೂರು ತಾಲ್ಲೂಕು ಅಧ್ಯಕ್ಷರಾಗಿ ಆಯುಷ್ಮಾನ್ ನಿರುಪದಿ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ.

ಸಂಘಟನೆಯ ಜಿಲ್ಲಾಧ್ಯಕ್ಷರಾದ ಮಲ್ಲಪ್ಪ ಗೌಡೂರು ಅವರು 2026ರ ಅಕ್ಟೋಬರ್ 18ರಂದು ಅಧಿಕೃತ ನೇಮಕಾತಿ ಆದೇಶ ಪತ್ರವನ್ನು ನೀಡಿ ಜವಾಬ್ದಾರಿ ವಹಿಸಿದ್ದಾರೆ. ದಲಿತರು ಹಾಗೂ ಅಲ್ಪಸಂಖ್ಯಾತ ಸಮುದಾಯದ



ಜನರು ಬುದ್ಧನ ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುವುದು ಮತ್ತು ಸಂವಿಧಾನ ಶಿಲ್ಪಿ, ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ ತತ್ವ–ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಜಾಗೃತಿ ಮೂಡಿಸುವುದು ಸಂಘಟನೆಯ ಪ್ರಮುಖ ಉದ್ದೇಶವಾಗಿದೆ.

ಈ ನಿಟ್ಟಿನಲ್ಲಿ ಸಂಘಟನೆಯು ವಿವಿಧ ಸಮಾಜಮುಖಿ ಹೋರಾಟಗಳು ಹಾಗೂ ಜನಜಾಗೃತಿ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಸಂಘಟನೆಯ ಚಟುವಟಿಕೆಗಳನ್ನು ಸಿಂಧನೂರು ತಾಲ್ಲೂಕಿನಲ್ಲಿ ಮತ್ತಷ್ಟು ವಿಸ್ತರಿಸಿ, ಸಮಾಜದ ಶೋಷಿತ ಹಾಗೂ ಹಿಂದುಳಿದ ವರ್ಗಗಳ ಹಕ್ಕುಗಳಿಗಾಗಿ ಹೋರಾಟಗಳನ್ನು ಬಲಪಡಿಸುವ ಉದ್ದೇಶದಿಂದ ಆಯುಷ್ಮಾನ್ ನಿರುಪದಿ ಅವರಿಗೆ ತಾಲ್ಲೂಕು ಅಧ್ಯಕ್ಷರ ಜವಾಬ್ದಾರಿ ವಹಿಸಲಾಗಿದೆ.

ಸಂಘಟನೆಯ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಕೋದಂಡರಾಮ ಆರ್. (ಒಃಂ), ಜಿಲ್ಲಾಧ್ಯಕ್ಷ ಮಲ್ಲಪ್ಪ ಗೌಡೂರು ಹಾಗೂ ಸಂಘಟನೆಯ ಇತರ ಪ್ರಮುಖರು ನೂತನ ತಾಲ್ಲೂಕು ಅಧ್ಯಕ್ಷರಿಗೆ ಅಭಿನಂದನೆ ಸಲ್ಲಿಸಿದ್ದಾರೆ. ಸಂಘಟನೆಯ ಮೂಲ ಉದ್ದೇಶ, ಆಶಯ ಹಾಗೂ ತತ್ವಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸಿ, ಸಂಘಟನೆಯನ್ನು ಇನ್ನಷ್ಟು ಬಲಿಷ್ಠಗೊಳಿಸುವಂತೆ ಶುಭ ಹಾರೈಸಿದ್ದಾರೆ.

ಜಾಲಹಳ್ಳಿಗ್ರಾಮ ಪಂಚಾಯತ್ ವಾರ್ಡ್‌ಗಳ ಎಸ್‌ಸಿ ಮೀಸಲಾತಿ ವಿವಾದಕ್ಕೆ ಜಿಲ್ಲಾಡಳಿತದ ಹಿಂಬರಹ

ಮೀಸಲಾತಿ ಮರುಪರಿಶೀಲನೆಗೆ ಸಲ್ಲಿಸಿದ್ದ ಮನವಿ ತಿರಸ್ಕಾರ; ನಿಯಮಾನುಸಾರ ಮೀಸಲಾತಿ ನಿಗದಿಪಡಿಸಿರುವುದಾಗಿ ಜಿಲ್ಲಾಧಿಕಾರಿ ಕಚೇರಿ ಹಿಂಬರಹ

❑ ನೈಜ್ಯ ದೆಸೆ ನ್ಯೂಸ್

ದೇವದುರ್ಗ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಪರಿಶಿಷ್ಟ ಜಾತಿ (ಎಸ್‌ಸಿ) ಸಮುದಾಯಕ್ಕೆ ಮೀಸಲಾತಿ ಕಲ್ಪಿಸುವಂತೆ ಕೋರಿ ಸಲ್ಲಿಸಿದ್ದ ಮನವಿಗೆ ಜಿಲ್ಲಾಡಳಿತ ಹಿಂಬರಹ ನೀಡಿದ್ದು, ಪ್ರಸ್ತುತ ಮೀಸಲಾತಿ ಬದಲಾವಣೆಗೆ ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿದೆ.

ಜಾಲಹಳ್ಳಿ ಗ್ರಾಮ ಪಂಚಾಯಿತಿಯ ವಾರ್ಡ್ ಸಂಖ್ಯೆ 02, 03, 04 ಹಾಗೂ 05ರಲ್ಲಿ ಪರಿಶಿಷ್ಟ ಜಾತಿ ಸಮುದಾಯದ ಜನಸಂಖ್ಯೆ



ಹೆಚ್ಚಿದ್ದರೂ, ಮೀಸಲಾತಿ ನಿಗದಿಪಡಿಸುವ ಸಂದರ್ಭದಲ್ಲಿ ಸಮರ್ಪಕವಾಗಿ ಪರಿಗಣಿಸಿಲ್ಲ ಎಂದು ಅರ್ಜಿದಾರರು ಆಕ್ಷೇಪಿಸಿದ್ದರು. 2026ರ ಮೀಸಲಾತಿ ಪಟ್ಟಿಯಲ್ಲಿ ಈ ವಾರ್ಡ್‌ಗಳಿಗೆ ಎಸ್‌ಸಿ ಮೀಸಲಾತಿ ಕಲ್ಪಿಸಬೇಕು ಎಂದು ಒತ್ತಾಯಿಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದರು. ಆದರೆ, ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳಲ್ಲಿನ ಸ್ಥಾನಗಳ ಅವತರಣೆ ಮತ್ತು ಮೀಸಲಿರಿಸುವಿಕೆ) ನಿಯಮಗಳು, 1998ರ ಅನ್ವಯ ಮೀಸಲಾತಿ ನಿಗದಿಪಡಿಸಲಾಗಿದೆ. ಈಗಾಗಲೇ ಮೀಸಲಾತಿ ಪಟ್ಟಿ ಪ್ರಕಟಗೊಂಡಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಅದನ್ನು ಬದಲಾಯಿಸಲು ಅವಕಾಶವಿಲ್ಲ ಎಂದು ಜಿಲ್ಲಾಡಳಿತ ತನ್ನ ಹಿಂಬರಹದಲ್ಲಿ ತಿಳಿಸಿದೆ.

ಹೀಗಾಗಿ, ಜಾಲಹಳ್ಳಿ ಗ್ರಾಮ ಪಂಚಾಯಿತಿಯ ಸಂಬಂಧಿತ ವಾರ್ಡ್‌ಗಳ ಮೀಸಲಾತಿಯನ್ನು ಮರುಪರಿಶೀಲಿಸುವಂತೆ ಸಲ್ಲಿಸಿದ್ದ ಮನವಿಯನ್ನು ಜಿಲ್ಲಾಡಳಿತ ತಿರಸ್ಕರಿಸಿದೆ. ಈ ಕುರಿತು ರಾಯಚೂರು ಜಿಲ್ಲಾಧಿಕಾರಿಗಳ ಕಚೇರಿಯಿಂದ 2026ರ ಅಕ್ಟೋಬರ್ 8ರಂದು ಹಿಂಬರಹ ನೀಡಲಾಗಿದೆ.

ಮನವಿ ಸಲ್ಲಿಸಿದವರು: ಅದ ರಂಗಪ್ಪ ತೊಗರಿ, ಭೀಮಣ್ಣ ಅಂಜಳ್, ಕುಮಾರ್ ಚಪ್ಪಳ್ ಕಿ, ಸಿದ್ದಪ್ಪ ಮ್ಯಾಗೇರಿ ಹಾಗೂ ಮೌನೇಶ್ ಯಲಗಟ್ಟಿ.

ಸಕ್ರಿಯ ಕ್ಷಯರೋಗ ಪತ್ತೆ ಕಾರ್ಯಕ್ರಮಕ್ಕೆ ಚಾಲನೆ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ನಗರದ ತಾಲೂಕ ಆರೋಗ್ಯ ಅಧಿಕಾರಗಳ ಕಾರ್ಯಾಲಯದಲ್ಲಿ ತಾಲೂಕ ಸಾರ್ವಜನಿಕ ಆಸ್ಪತ್ರೆಯ ವೈದಾಧಿಕಾರಿಗಳಾದ ಡಾ. ಹರ್ಷ ತೋಟದ್ ಅವರು ಸಕ್ರಿಯ ಕ್ಷಯರೋಗ ಪತ್ತೆ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು. ನಂತರ ಮಾತನಾಡಿದ ಅವರು, ಕ್ಷಯ ರೋಗವು ಸಾಂಕ್ರಾಮಿಕ ರೋಗ ವಾಗಿದ್ದು ಈ ರೋಗವನ್ನು ನಿರ್ಮೂಲನೆ ಮಾಡುವ ಉದ್ದೇಶದಿಂದ ಸರ್ಕಾರ ರಾಜ್ಯದಲ್ಲಿ ಸಕ್ರಿಯ ಕ್ಷಯರೋಗ ಪತ್ತೆ ಕಾರ್ಯಕ್ರಮವನ್ನು ಹಮ್ಮಿಕೊಂಡಿರುತ್ತಾರೆ.

ಅದರಂತೆ ರಾಯಚೂರು ಜಿಲ್ಲೆಯಲ್ಲಿ ಕ್ಷಯರೋಗ ಪತ್ತೆ ಕಾರ್ಯಕ್ರಮ ದಿನಾಂಕ 27– 10– 2026 ರಿಂದ 08–12–2026 ರ ವರೆಗೆ ನಡೆಯಲಿದ್ದು ಈ ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಆಶಾ ಕಾರ್ಯಕರ್ತರು ಸ್ವಯಂಸೇವಕರು ಕೆಲವು ಆಯ್ದು ಉಪಕೇಂದ್ರ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಮನೆ ಮನೆ ಭೇಟಿ ಮಾಡಿ ಮನೆಯ ಸದಸ್ಯರ ಆರೋಗ್ಯವನ್ನು ವಿಚಾರಿಸಿ ಕುಟುಂಬದಲ್ಲಿ ಯಾವುದೇ ವ್ಯಕ್ತಿಗೆ ಕ್ಷಯ ರೋಗದ ಲಕ್ಷಣಗಳು ಕಂಡು ಬಂದರೆ ಅಂತ ವ್ಯಕ್ತಿಗಳನ್ನು ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೇಂದ್ರ



ಹಾಗೂ ಸಾರ್ವಜನಿಕ ಆಸ್ಪತ್ರೆ ಇಲ್ಲಿಗೆ ಕಫ ಪರೀಕ್ಷೆ ಮತ್ತು ಎಕ್ಸರೇ ಗೆ ಕಳಿಸಲಾಗುತ್ತದೆ. ರೋಗವು ದೃಢಪಟ್ಟರೆ ಆ ವ್ಯಕ್ತಿಗೆ ಹತ್ತಿರದ ಆರೋಗ್ಯ ಮತ್ತು ಕ್ಷೇಮ ಕೇಂದ್ರ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ನೀಡಲಾಗುತ್ತದೆ.

ಕ್ಷಯ ರೋಗ ತಪಾಸಣೆ ಮತ್ತು ಚಿಕಿತ್ಸೆ ಸಂಪೂರ್ಣ ಉಚಿತವಾಗಿರುತ್ತದೆ. ಆ ಗ್ರಾಮಗಳ ಜನರು ಮನೆಗೆ ಭೇಟಿ ನೀಡುವಂತಹ ಆರೋಗ್ಯ ಇಲಾಖೆಯ ಸಿಬ್ಬಂದಿಗಳಿಗೆ ಸಹಕರಿಸುವಂತೆ ಕರೆ ನೀಡಿದರು. ಜಿಲ್ಲಾ ಮೇಲ್ವಿಚಾರಕರಾದ ಮೋಹಿನ್ ಪಾಷಾ (PPM) ಅವರು ಮಾತನಾಡಿ ಕ್ಷಯ ರೋಗವು ಗುಣಮುಖವಾಗುವಂತ ರೋಗವಾಗಿದ್ದು ಕ್ಷಯ ರೋಗದ ಲಕ್ಷಣಗಳು ಎರಡು ವಾರಕ್ಕಿಂತ ಹೆಚ್ಚು ಕೆಮ್ಮು ಇರುವುದು ಕಫ ಕಾಣಿಸಿಕೊಳ್ಳುವುದು ಕಫದಲ್ಲಿ ರಕ್ತ ಬೀಳುವುದು ಹಸಿವಾಗದೆ ಇರುವುದು ತೂಕ ಕಡಿಮೆಯಾಗುವುದು ಎದೆ ನೋವು ಕಾಣಿಸಿಕೊಳ್ಳುವುದು ಇತರೆ ರೋಗದ ಲಕ್ಷಣಗಳು ಕಂಡು ಬಂದರೆ ತಕ್ಷಣವೇ ಹತ್ತಿರದ ಸರ್ಕಾರಿ ಆಸ್ಪತ್ರೆ ಭೇಟಿ ನೀಡಿ ಪರೀಕ್ಷೆ ಮಾಡಿಸಿ ರೋಗಕ್ಕೆ ಸರಿಯಾಗಿ ಆರು ತಿಂಗಳ ಕಾಲ ಚಿಕಿತ್ಸೆ ಪಡೆದರೆ ಸಂಪೂರ್ಣ ಗುಣಮುಖ ವಾಗುತ್ತದೆ.

ಚಿಕಿತ್ಸೆಯ ಸಮಯದಲ್ಲಿ ರೋಗಿಗೆ



ಪೌಷ್ಟಿಕ ಆಹಾರದ ನಿಮಿತ್ತ ಮಾಸಿಕ 1000 ರೂಪಾಯಿಗಳನ್ನು ಚಿಕಿತ್ಸೆ ಮುಗಿಯುವವರೆಗೆ ರೋಗಿಗೆ ಡಿ.ಬಿ.ಟಿ ಮೂಲಕ ನೀಡಲಾಗುತ್ತದೆ. ಸಾರ್ವಜನಿಕರು ಈ ಸೌಲಭ್ಯವನ್ನು ಸದುಪಯೋಗ ಮಾಡಿಕೊಳ್ಳಲು ತಿಳಿಸಿದರು. ಕಾರ್ಯಕ್ರಮದಲ್ಲಿ ತಾಲೂಕು ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಡಾ. ದೌಲಸಾಬ್ ಡಾ.ಶ್ವೇತಾಂಬರಿ ಡಾ. ,ಡಾ. ಮೇರಿ , ತಾಲೂಕು ಹಿರಿಯ ಆರೋಗ್ಯ ನಿರೀಕ್ಷಣ ಅಧಿಕಾರಿ ಸಂಗನಗೌಡ ಪಾಟೀಲ್ ತಾಲೂಕು ಕ್ಷಯ ರೋಗ ಮೇಲ್ವಿಚಾರಕರಾದ ಯಮುನರಪ್ಪ, ಸುರೇಶರೆಡ್ಡಿ ವಿರೂಪಾಪುರ ಅಬ್ದುಲ್ ಹಮೀದ್ ಹಿರಿಯ ಆರೋಗ್ಯ ನಿರೀಕ್ಷಣ ಅಧಿಕಾರಿಗಳು, ಆರೋಗ್ಯ ನಿರೀಕ್ಷಣಾಧಿಕಾರಿಗಳು, ಹಿರಿಯ ಪ್ರಾಥಮಿಕ ಸುರಕ್ಷತ ಅಧಿಕಾರಿಗಳು, ಪ್ರಾಥಮಿಕ ಸುರಕ್ಷತ ಅಧಿಕಾರಿಗಳು, ಸಮುದಾಯ ಆರೋಗ್ಯ ಅಧಿಕಾರಿಗಳು, ಮತ್ತು ಆಶಾ ಕಾರ್ಯಕರ್ತರು, ಸ್ವಯಂಸೇವಕರು ಭಾಗವಹಿಸಿದ್ದರು.

ಕಬ್ಬು ಬೆಳೆಗಾರರ ಜೊತೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಸಭೆ

❑ ನೈಜ್ಯ ದೆಸೆ ನ್ಯೂಸ್

ಹುಬ್ಬಳ್ಳಿ: ಕಬ್ಬು ಬೆಳೆಗಾರರ ವಿವಿಧ ಬೇಡಿಕೆಗಳ ಈಡೇರಿಕೆ ಕುರಿತು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಸಂಸದ ಜಗದೀಶ ಶೆಟ್ಟರ್ ಹಾಗೂ ರೈತ ಮುಖಂಡರ ನಡುವೆ ಹುಬ್ಬಳ್ಳಿಯ ಸರ್ಕ್ಯೂಟ್ ಹೌಸ್‌ನಲ್ಲಿ ಸುದೀರ್ಘ ಸಭೆ ನಡೆಯಿತು. ಆದರೆ, ಸಭೆಯಲ್ಲಿ ಯಾವುದೇ ಸ್ಪಷ್ಟ ಅಂತಿಮ ತೀರ್ಮಾನ ಕೈಗೊಳ್ಳಲು ಸಾಧ್ಯವಾಗಿಲ್ಲ. ಹೀಗಾಗಿ, ರೈತರ ಹೋರಾಟ ಮುಂದುವರಿಯಲಿದೆಯೇ ಅಥ‘ವಾ ತಾತ್ಕಾಲಿಕವಾಗಿ ಹಿಂಪಡೆಯಲಾಗುತ್ತದೆಯೇ ಎಂಬುದು ಕುತೂಹಲ ಮೂಡಿಸಿದೆ.

ಸಭೆಯಲ್ಲಿ ರೈತ ಮುಖಂಡರಾದ ಚೂನಪ್ಪ ಪೂಜೇರಿ, ಶಶಿಕಾಂತ್ ಗುರೂಜಿ ಸೇರಿದಂತೆ ವಿವಿಧ ರೈತ ಸಂಘಟನೆಗಳ ಪ್ರತಿನಿಧಿಗಳು, ಮಾಜಿ ಸಚಿವ ಸಿ.ಸಿ. ಪಾಟೀಲ, ಶಾಸಕ ಮಹೇಶ ತೇಂಗಿನಕಾಯಿ ಹಾಗೂ ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಭಾಗವಹಿಸಿದ್ದರು. ಸಭೆಯ ಬಳಿಕ ಮಾತನಾಡಿದ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, “ರೈತ ಮುಖಂಡರ ನಿಯೋಗ,



ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಗಿದೆ. ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸುತ್ತಿದೆ. ಕೇಂದ್ರ ಸರ್ಕಾರ ಯಾವತ್ತೂ ರೈತರ ಪರವಾಗಿದೆ” ಎಂದರು.

“ರೈತರ ಬೇಡಿಕೆಗಳ ಕುರಿತು ಈಗಾಗಲೇ ಸಮಿತಿ ರಚಿಸಲಾಗಿದ್ದು, ಸಮಿತಿಯು ಶೀಘ್ರದಲ್ಲೇ ಸಭೆ ಸೇರಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಲಿದೆ. ಈ ಪ್ರಕ್ರಿಯೆ ಸುಗಮವಾಗಿ ನಡೆಯಲು ಅನುಕೂಲಕರ ವಾತಾವರಣ ನಿರ್ಮಾಣವಾಗಬೇಕು. ಹೀಗಾಗಿ, ರೈತರು ಹೋರಾಟವನ್ನು ಕೈಬಿಡುವಂತೆ ತಾವು, ಸಂಸದ ಜಗದೀಶ ಶೆಟ್ಟರ್ ಹಾಗೂ ಇತರ ನಾಯಕರು ಮನವಿ ಮಾಡಿದ್ದೇವೆ. ಸಭೆಯಲ್ಲಿ ಚರ್ಚಿಸಿದ ವಿಚಾರಗಳಿಗೆ ರೈತ ಮುಖಂಡರು ಸಹಮತ ವ್ಯಕ್ತಪಡಿಸಿದ್ದಾರೆ” ಎಂದು ತಿಳಿಸಿದರು. ಇದೇ ವೇಳೆ ಮಾತನಾಡಿದ ಮಾಜಿ ಸಚಿವ ಸಿ.ಸಿ. ಪಾಟೀಲ, “ಕಬ್ಬು ಬೆಳೆಗಾರರ ಬೇಡಿಕೆಗಳ ಕುರಿತು ರೈತ ಮುಖಂಡರೊಂದಿಗೆ ಸುದೀರ್ಘ ಚರ್ಚೆ ನಡೆಸಲಾಗಿದೆ.

ಮಧ್ಯರಾತ್ರಿಯವರೆಗೂ ಸಭೆ ನಡೆಸಿ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸಲಾಗಿದೆ. ಮುಂದಿನ ದಿನಗಳಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು. ಈಗಾಗಲೇ ರಚಿಸಿರುವ ಸಮಿತಿ ಶೀಘ್ರ ಸಭೆ ಸೇರಿ ರೈತರ ಬೇಡಿಕೆಗಳ ಈಡೇರಿಕೆಗೆ ಶ್ರಮಿಸಲಿದೆ” ಎಂದರು. ತೇಗೂರು ಸಭೆಯತ್ತ ಎಲ್ಲರ ಚಿತ್ತ ಸಭೆಯ ಬಳಿಕ ಮಾತನಾಡಿದ ರಾಜ್ಯ ರೈತ ಸಂಘದ ಅಧ್ಯಕ್ಷ ಚೂನಪ್ಪ ಪೂಜೇರಿ, “ಸಚಿವರು, ಸಂಸದರು ಹಾಗೂ ಶಾಸಕರು ರೈತರ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದ್ದಾರೆ.

ಈ ಹಿನ್ನೆಲೆಯಲ್ಲಿ ರೈತ ಮುಖಂಡರು ಹಾಗೂ ರೈತರೊಂದಿಗೆ ಚರ್ಚಿಸಿ ಹೋರಾಟವನ್ನು ಮುಂದುವರಿಸಬೇಕೇ ಅಥವಾ ತಾತ್ಕಾಲಿಕವಾಗಿ ಹಿಂಪಡೆಯಬೇಕೇ ಎಂಬುದರ ಕುರಿತು ನಿರ್ಧಾರ ಕೈಗೊಳ್ಳಲಾಗುವುದು” ಎಂದು ತಿಳಿಸಿದರು. ಹುಬ್ಬಳ್ಳಿಯಲ್ಲಿ ನಡೆದ ಸಭೆಯಲ್ಲಿ ಅಂತಿಮ ನಿರ್ಧಾರ ಹೊರಬೀಳದ ಹಿನ್ನೆಲೆಯಲ್ಲಿ ಇಂದು ಧಾರವಾಡ ಜಿಲ್ಲೆಯ ತೇಗೂರಿನಲ್ಲಿ ನಡೆಯಲಿರುವ ರೈತರ ಸಭೆ ಮಹತ್ವ ಪಡೆದುಕೊಂಡಿದೆ. ಈ ಸಭೆಯಲ್ಲಿ ರೈತರ ಹೋರಾಟದ ಮುಂದಿನ ರೂಪುರೇಷೆ ನಿರ್ಧಾರವಾಗುವ ಸಾಧ್ಯತೆಯಿದ್ದು, ಕಬ್ಬು ಬೆಳೆಗಾರರ ಮುಂದಿನ ನಡೆ ಏನಿರಲಿದೆ ಎಂಬುದರತ್ತ ಎಲ್ಲರ ಗಮನ ನೆಟ್ಟಿದೆ.

ರೈತರ ಆತಂಕ ದೂರಾಗಲಿ, ಮಳೆ–ಬೆಳೆ ಸಮೃದ್ಧಿಯಾಗಲಿ: ಕಂಪ್ಲಿಯಲ್ಲಿ ವಿಶಿಷ್ಟ ದೀರ್ಘದಂಡ ನಮಸ್ಕಾರದ ಮೂಲಕ ದೇವರಲ್ಲಿ ರೈತ ಮುಖಂಡನ ಪ್ರಾರ್ಥನೆ

❑ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ಲೋಕಕಲ್ಯಾಣ, ನಾಡಿನ ಸುಭಿಕ್ಷೆ ಹಾಗೂ ಸಮೃದ್ಧ ಮಳೆ–ಬೆಳೆಯಾಗಲಿ ಎಂದು ಪ್ರಾರ್ಥಿಸಿ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಕಂಪ್ಲಿ ತಾಲೂಕು ಅಧ್ಯಕ್ಷ ವಿ. ವಿರೇಶ ಅವರು ತಾಲೂಕಿನ ಎಮ್ಮಿಗನೂರು ಗ್ರಾಮದಲ್ಲಿ ಸೋಮವಾರ ದೀರ್ಘದಂಡ ಸಾಷ್ಟಾಂಗ ನಮಸ್ಕಾರ ಹಾಕುವ ಮೂಲಕ ವಿಶಿಷ್ಟವಾಗಿ ಹರಕೆ ಸಲ್ಲಿಸಿದರು.

ಗ್ರಾಮದ ಬನ್ನಿಮಹಾಂಕಾಳಿ ಕಟ್ಟೆಯಿಂದ ಪ್ರಾರಂಭಿಸಿ, ಪ್ರಮುಖ ರಸ್ತೆಗಳ ಮೂಲಕ ನೂರಾರು ರೈತರ ಸಮ್ಮುಖದಲ್ಲಿ ಜಡಿತಾತ ದೇವಸ್ಥಾನದ ಸನ್ನಿಧಾನದವರೆಗೆ ಅವರು ಸಾಷ್ಟಾಂಗ ನಮಸ್ಕಾರ ಸಲ್ಲಿಸಿ ದೇವರಲ್ಲಿ ಮೊರೆ ಇಟ್ಟರು.

ಡಿಸೆಂಬರ್ 20ರವರೆಗೆ ನೀರು ಹರಿಸಿ ? ವಿ. ವಿರೇಶ ಆಗ್ರಹ: ನಂತರ ಮಾತನಾಡಿದ ರೈತ ಮುಖಂಡ ವಿ. ವಿರೇಶ ಅವರು, ಸರ್ಕಾರದ ನೀರಾವರಿ ನೀತಿಯ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. "ಅಕ್ಟೋಬರ್ 19ರಂದು ಬೆಂಗಳೂರಿನಲ್ಲಿ ನಡೆಯಲಿರುವ ತುಂಗಭದ್ರ ಜಲಾಶಯದ ನೀರಾವರಿ ಸಲಹಾ ಸಮಿತಿ (ICC) ಸಭೆಯಲ್ಲಿ ಎಲ್‌ಎಲ್‌ಸಿ (LLC) ಕೆಳಭಾಗದ ರೈತರಿಗೆ ಮುಂಗಾರು ಬೆಳೆ ಕೈಸೇರುವವರೆಗೂ ನೀರು ಹರಿಸುವ ನಿರ್ಧಾರ ಕೈಗೊಳ್ಳಬೇಕು. ಈಗಾಗಲೇ ಸಮರ್ಪಕ ನೀರಿಲ್ಲದೆ ಕೆಳಭಾಗದ ರೈತರು ಸಂಕಷ್ಟದಲ್ಲಿದ್ದಾರೆ" ಎಂದರು.

ಜೊತೆಗೆ, "ರೈತ ದೇಶದ ಬೆನ್ನೆಲುಬು ಎಂಬುದು ಕೇವಲ ಗಾದೆ ಮಾತಿಗೆ ಸೀಮಿತವಾಗಿದೆ. ಅಧಿಕಾರಿಗಳು ಮತ್ತು ಸರ್ಕಾರಕ್ಕೆ ರೈತರ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ. ಜಲಾಶಯದಲ್ಲಿ ಸಾಕಷ್ಟು ನೀರಿದ್ದರೂ ಕುಡಿಯುವ



ನೀರಿನ ನೆಪದಲ್ಲಿ ಕಾರ್ಖಾನೆಗಳಿಗೆ ನೀರು ಹರಿಸುವ ಹುನ್ನಾರ ನಡೆಯುತ್ತಿದೆ. ಕೂಡಲೇ ಸರ್ಕಾರ ಮತ್ತು ನೀರಾವರಿ ಅಧಿಕಾರಿಗಳು ಎಚ್ಚೆತ್ತುಕೊಂಡು ಡಿಸೆಂಬರ್ 20ರವರೆಗೆ ಎಲ್‌ಎಲ್ ಕಾಲುವೆಗೆ ನೀರು ಹರಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಎದುರಿಸಬೇಕಾಗುತ್ತದೆ" ಎಂದು ಎಚ್ಚರಿಕೆ ನೀಡಿದರು.

ಸರ್ಕಾರಕ್ಕೆ ಚಳಿ ಬಿಡಿಸುವ ತಾಕತ್ತು ರೈತರಿಗಿದೆ: ರಾಜ್ಯ ಕಾರ್ಯಾಧ್ಯಕ್ಷ ಬಿ.ವಿ. ಗೌಡ ಮಾತನಾಡಿ, "ಸರ್ಕಾರ ಮತ್ತು ಅಧಿಕಾರಿಗಳು ರೈತರ ಮೇಲೆ ಸವಾರಿ ಮಾಡಲು ಹೊರಟಿದ್ದಾರೆ. ರೈತರು ಮನಸ್ಸು ಮಾಡಿದರೆ ಸರ್ಕಾರಕ್ಕೆ ಚಳಿ ಬಿಡಿಸುವ ತಾಕತ್ತಿದೆ. ಆದ್ದರಿಂದ ತಕ್ಷಣವೇ ಮುಂಗಾರು ಬೆಳೆಗೆ ಸಮರ್ಪಕ ನೀರು ಪೂರೈಸಬೇಕು" ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷ ಕಾಸಿಂಸಾಬ್, ತಾಲೂಕು ಕಾರ್ಯಾಧ್ಯಕ್ಷ ಕೊಟ್ಟೂರು ರಮೇಶ, ಉಪಾಧ್ಯಕ್ಷ ಕಾಗಿ ಈರಣ್ಣ, ಎಮ್ಮಿಗನೂರು ಗ್ರಾಮ ಘಟಕದ ಅಧ್ಯಕ್ಷ ಸಣ್ಣ ಜಡೆಪ್ಪ, ರೈತ ಮುಖಂಡರಾದ ಎನ್. ಸೂಗಪ್ಪಧಣಿ, ಸದಾಶಿವಪ್ಪಧಣಿ, ಅಡಿವೆಯ್ಯಸ್ವಾಮಿ, ಕೆ. ತಿಪ್ಪಯ್ಯ ಸೇರಿದಂತೆ ನೂರಾರು ರೈತರು ಉಪಸ್ಥಿತರಿದ್ದರು.

ನೇಮಕಾತಿ ಪ್ರಕಟಣೆ

ಬಿಜಿಸಿಎಲ್ ನೇಮಕಾತಿ 2026 – 29 ಅಸಿಸ್ಟೆಂಟ್ ಅಸೋಸಿಯೇಟ್, ಅಸೋಸಿಯೇಟ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಅಕ್ಟೋಬರ್ 12, 2026

ISRO HSFC ನೇಮಕಾತಿ 2026: 04 ವೈದ್ಯಾಧಿಕಾರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ISRO ಹ್ಯೂಮನ್ ಸ್ಪೇಸ್ ಫ್ಲೈಟ್ ಸೆಂಟರ್ (ISRO HSFC), ಅಕ್ಟೋಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ವೈದ್ಯಾಧಿಕಾರಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕದ ಬೆಂಗಳೂರಿನಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 08-ನವೆಂಬರ್-2026 ರಂದು ಅಥವಾ ಅದಕ್ಕೂ ಮೊದಲು ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: isro.gov.in

ಬರಗಾಲದ ಆತಂಕ, ಬೆಲೆ ಏರಿಕೆಯ ಬಿಸಿ: ಕಂಪ್ಲಿಯಲ್ಲಿ ಸಕಲ ವಿಘ್ನಗಳ ನಡುವೆಯೂ ದಸರಾ, ಆಯುಧ ಪೂಜೆ ಖರೀದಿ ಭರಾಟೆ ಜೋರು

ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಗಣಿನಾಡು ಖ್ಯಾತಿಯ ಬಳ್ಳಾರಿ ಜಿಲ್ಲೆಯಲ್ಲಿ ಈ ಬಾರಿ ವರುಣನ ಕೃಪೆಯಾಗದೆ ತೀವ್ರ ಬರದ ಛಾಯೆ ಆವರಿಸಿದೆ. ರೈತರು ಬೆಳೆ ಕೈಸೇರದೆ ಆತಂಕದಲ್ಲಿದ್ದಾರೆ. ಇಂತಹ ಕಠಿಣ ಪರಿಸ್ಥಿತಿಯ ನಡುವೆಯೂ, ನಾಡಹಬ್ಬ ದಸರಾ ಮತ್ತು ಆಯುಧ ಪೂಜೆಯನ್ನು ಸಾಂಪ್ರದಾಯಿಕವಾಗಿ ಆಚರಿಸಲು ಕಂಪ್ಲಿ ಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮೀಣ ಭಾಗದ ಜನರು ಸಜ್ಜಾಗಿದ್ದಾರೆ. ಸೋಮವಾರ ಕಂಪ್ಲಿ ಪಟ್ಟಣದ ಮಾರುಕಟ್ಟೆಯಲ್ಲಿ ಹೂವು, ಹಣ್ಣು ಸೇರಿದಂತೆ ನಾನಾ ಪೂಜಾ ಸಾಮಾಗ್ರಿಗಳ ಖರೀದಿಯ ಭರಾಟೆ ಜೋರಾಗಿ ಕಂಡುಬಂತು

ಮಾರುಕಟ್ಟೆಯತ್ತ ಹ-ರಿದುಬಂದ ಜನಸಾಗರ ದಸರಾ ಹಬ್ಬ ಬಂತೆಂದರೆ ಎಲ್ಲೆಡೆ ಸಡಗರ ಸಂಭ್ರಮ ಇದ್ದೇ ಇರುತ್ತದೆ. ಅದರಂತೆಯೇ ಕಂಪ್ಲಿ ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ಆಯುಧಪೂಜೆ ಮತ್ತು ವಿಜಯದಶಮಿ ಆಚ-ರಣೆಗಾಗಿ ರೈತರು, ವ್ಯಾಪಾರಿಗಳು ಹಾಗೂ ಸಾರ್ವಜನಿಕರು ಮುಂಜಾನೆಯಿಂದಲೇ ಕಂಪ್ಲಿ ಪಟ್ಟಣದತ್ತ ಮುಖ ಮಾಡಿದ್ದರು. ಹೂವು, ಹಣ್ಣು, ಕಾಯಿ, ಕುಂಬಳಕಾಯಿ, ಚೆಂಡುಹೂವು, ಬಾಳೆಕಂಬ ಸೇರಿದಂತೆ ಇನ್ನಿತರ ಪೂಜಾ ಸಾಮಾಗ್ರಿಗಳನ್ನು ಖರೀದಿಸಲು



ಮಾರುಕಟ್ಟೆಯ ರಸ್ತೆ ಬದಿಯ ವ್ಯಾಪಾರಸ್ಥರ ಮುಂದೆ ಗ್ರಾಹಕರು ಮುಗಿಬಿದ್ದಿದ್ದರು.

ಜೇಬಿಗೆ ಕತ್ತರಿ ಹಾಕಿದ ಬೆಲೆ ಏರಿಕೆಯ ಬಿಸಿ ಈ ಬಾರಿ ಬರದ ಛಾಯೆ ಮೂಡಿದ್ದು, ರೈತರ ಬೆಳೆಗಳು ಕೈಸೇರುವ ತನಕ ಕಾಯುವಂತ ಭೀಕರ ಪರಿಸ್ಥಿತಿ ತಂದೊಡ್ಡಿದೆ. ಈ ಬರದ ನಡುವೆ ಹಬ್ಬ ಆಚರಣೆಗಾಗಿ ಸಕಲ ಸಿದ್ಧತೆಗಳು ನಡೆದಿವೆಯಾದರೂ, ಪೂಜಾ ಸಾಮಾಗ್ರಿಗಳ ಬೆಲೆ ಗಗನಕ್ಕೇರಿರುವುದು ಸಾರ್ವಜನಿಕರ ಜೇಬಿಗೆ ಭಾರಿ ಕತ್ತರಿ ಹಾಕಿದೆ. ಬರ ಒಂದು ಕಡೆಯಾದರೆ, ಮತ್ತೊಂದೆಡೆ ಹಬ್ಬದ ದಿನದ ಬೆಲೆ ಏರಿಕೆಯ ಬಿಸಿ ರೈತರ ಹಾಗೂ ಸಾಮಾನ್ಯ ಜನರ ನಿದ್ದೆಗೆಡಿಸಿದೆ. ಆದಾಗ್ಯೂ, ಸಂಪ್ರದಾಯವನ್ನು ಮುಂದುವರಿಸಲು ಜನರು ಬೆಲೆಯನ್ನು ಲೆಕ್ಕಿಸದೆ ಖರೀದಿಯಲ್ಲಿ ತೊಡಗಿಸಿಕೊಂಡಿದ್ದಾರೆ.

* ಸೇವಂತಿಗೆ ಹೂವು: ?200 ರಿಂದ ?250
* ಸುಗಂಧರಾಜ ಹೂವು: ?250
* ಚೆಂಡುಹೂವು: ?60 ರಿಂದ ?80
* ಕುಂಬಳಕಾಯಿ (ಒಂದಕ್ಕೆ): ?50 ರಿಂದ ?60

ಕುಂಬಳಕಾಯಿ ಖರೀದಿಗೆ ಭಾರಿ ಡಿಮ್ಯಾಂಡ್ ಆಯುಧ ಪೂಜೆಯ ದಿನದಂದು ವಾಹನಗಳು, ಯಂತ್ರೋಪಕರಣಗಳು ಹಾಗೂ ಅಂಗಡಿ ಮುಂಗಟ್ಟುಗಳಿಗೆ ದೃಷ್ಟಿ ತೆಗೆಯಲು ಬಳಸುವ ಕುಂಬಳಕಾಯಿಗಳಿಗೆ ಮಾರುಕಟ್ಟೆಯಲ್ಲಿ ಭಾರಿ ಬೇಡಿಕೆ ಇತ್ತು. ಪಟ್ಟಣದ ಡಾ. ರಾಜ್‌ಕುಮಾರ್ ಮುಖ್ಯರಸ್ತೆಯ ನಿರ್ಮಲ ಮೆಡಿಕಲ್ ಬಳಿಯ ಮುಖ್ಯ ರಸ್ತೆ ಬದಿಯಲ್ಲಿ ಗ್ರಾಹಕರು ಸಾಲುಗಟ್ಟಿ

"ಹಬ್ಬದ ನೆಪದಲ್ಲಿ ದುಬಾರಿ ದರ"
"ಕಳೆದ ವಾರಕ್ಕೆ ಹೋಲಿಸಿದರೆ ಹೂವು, ಹಣ್ಣುಗಳ ಬೆಲೆ ದುಪ್ಪಟ್ಟಾಗಿದೆ. ಆಯುಧ ಪೂಜೆಗೆ ಕುಂಬಳಕಾಯಿ ಕಡ್ಡಾಯವಾಗಿ ಬೇಕೇ ಬೇಕು, ಹಾಗಾಗಿ 60 ಕೊಟ್ಟಾದರೂ ಕೊಳ್ಳಲೇಬೇಕಾದ ಪರಿಸ್ಥಿತಿ ಇದೆ ಹಬ್ಬದ ಸಡಗರವಿದ್ದರೂ, ಬೆಲೆ ಏರಿಕೆ ಜೇಬಿಗೆ ಭಾರಿ ಕತ್ತರಿ ಹಾಕುತ್ತಿದೆ."
ರತ್ನಮ್ಮ, ಗ್ರಾಹಕರು, ಕಂಪ್ಲಿ ಪಟ್ಟಣ.

ನಿಂತು ಕುಂಬಳಕಾಯಿ ಖರೀದಿಸುತ್ತಿದ್ದ ದೃಶ್ಯಗಳು ಕಂಡುಬಂದವು ಒಟ್ಟಾರೆಯಾಗಿ, ಗ್ರಾಹಕರಿಗೆ ಆರ್ಥಿಕ ಹೊರೆಯಾದರೂ ಸಹ ಕಂಪ್ಲಿ ಮಾರುಕಟ್ಟೆಯಲ್ಲಿ ವ್ಯಾಪಾರ-ವಹಿವಾಟು ಅತ್ಯಂತ ಬಿರುಸಿನಿಂದ ಸಾಗಿದೆ. =====ಕೋಟ್ ==== "ಬರಗಾಲದಿಂದ ಕೈಯಲ್ಲಿ ಹಣವಿಲ್ಲ" "ಈ ಬಾರಿ ಮಳೆ ಇಲ್ಲದೆ ಬೆಳೆಗಳೆಲ್ಲ ಒಣಗುತ್ತಿವೆ. ಕೈಯಲ್ಲಿ ಸರಿಯಾಗಿ ಹಣವಿಲ್ಲ.

ಆದರೂ ವರ್ಷಕ್ಕೊಮ್ಮೆ ಬರುವ ನಾಡಹಬ್ಬವನ್ನು ಬಿಡಲು ಹೇಗೆ ಸಾಧ್ಯ? ಸಾಲಸೋಲ ಮಾಡಿಯಾದರೂ ಪೂಜೆಗೆ ಬೇಕಾದ ಸಾಮಗ್ರಿಗಳನ್ನು ಖರೀದಿಸುತ್ತಿದ್ದೇವೆ. ಆದರೆ ಬೆಲೆಗಳು ಮಾತ್ರ ಸಾಮಾನ್ಯ ಜನ-ರಿಗೆ ತೀರಾ ಹೊರೆಯಾಗಿವೆ." ಬಸವರಾಜ, ಸ್ಥಳೀಯ ರೈತ, ಕಂಪ್ಲಿ ತಾಲೂಕು.

ಮೃತ ವ್ಯಕ್ತಿಯ ಮನೆಗೆ ಶಾಸಕ ನಾಡಗೌಡ ಭೇಟಿ:ಸಾಂತ್ವನ

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪಟ್ಟಣದ ಮುಸ್ಲಿಂ ಸಮಾಜದ ಕ್ರಿಯಾಶೀಲ ಮುಖಂಡರು ಹಾಗೂ ನ್ಯಾಯವಾದಿಗಳಾದ ಎನ್ ಎಸ್ ಬಡಗಣ ಅವರು ಇತ್ತೀಚಿಗೆ ನಿಧನರಾದ ಹಿನ್ನೆಲೆಯಲ್ಲಿ ಅವರ ಮನೆಗೆ ಶಾಸಕ ಅಪ್ಪಾಜಿ ನಾಡಗೌಡರು ಸೋಮವಾರ ಭೇಟಿ ನೀಡಿ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.



ಈ ಸಂದರ್ಭದಲ್ಲಿ ಶಾಸಕರು ಎನ್‌ಎಸ್ ಬಡಗಣ ಅವರ ಕುರಿತು ಮಾತನಾಡಿ ಅವರೊಬ್ಬ ಅತ್ಯಂತ ಸರಳ ವ್ಯಕ್ತಿತ್ವ, ಮೃದು ಸ್ವಭಾವದ ಸ್ನೇಹಪರ ವ್ಯಕ್ತಿಗಳಾಗಿದ್ದರು. ಅನಾರೋಗ್ಯದಿಂದಾಗಿ ಅವರು ನಮ್ಮನ್ನು ಅಗಲಿದ್ದಾರೆ ಇಷ್ಟು ಬೇಗ ಅವರು ನಮ್ಮಿಂದ ದೂರ ವಾಗಬಾರದಿತ್ತು ಆದರೆ ಇದು ವಿಧಿ ಲಿಖಿತ ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ ಎಂದು ತಿಳಿಸಿ ನಾನು ಅವರ ಆತ್ಮಕ್ಕೆ ಶಾಂತಿ ಕೋರುತ್ತೇನೆ, ಭಗವಂತ ಅವರ ಕುಟುಂಬದ ಸದಸ್ಯರಿಗೆ ಈ ನೋವನ್ನು ಸಹಿಸುವ ಶಕ್ತಿಯನ್ನು ನೀಡಲೆಂದು ಪ್ರಾರ್ಥಿಸುತ್ತೇನೆ ಎಂದರು. ಈ ಸಂದರ್ಭದಲ್ಲಿ ಬಡಗಣ ಕುಟುಂಬದ ಸದಸ್ಯರಾದ ರಿಯಾಜ ಬಡಗಣ, ರಿಹಾನ ಮಲಿಕ್ ಬಡಗಣ, ಟಿಪ್ಪು ಸುಲ್ತಾನ್ ಬಡಗಣ, ಅಬ್ದುಲ್ ಜಬ್ಬಾರ ಬಡಗಣ, ಬೇಪಾರಿ ಜಮಾತ್ ಅಧ್ಯಕ್ಷ ಮೊಹಮ್ಮದಸಾಬ ಲಾಹೋರಿ, ಪುರಸಭೆ ಮಾಜಿ ಸದಸ್ಯ ಮಂಜೂರ ಅಲಿ ಬೇಪಾರಿ, ಮುಖಂಡರಾದ ಸಿದ್ದನಗೌಡ ಪಾಟೀಲ(ನಾವದಗಿ), ಪ್ರಭುಗೌಡ ಮದರಕಲ್ಲ, ಉಮರ ಮೂಲಿಮನಿ (ನಾಲತವಾಡ), ಶಾಸಕರ ಆಪ್ತ ಸಹಾಯಕ ಮಲ್ಲಿಕಾರ್ಜುನ ಬಾಗೇವಾಡಿ ಮತ್ತಿತರರು ಇದ್ದರು.

ಕನ್ನಡ ರಾಜ್ಯೋತ್ಸವ ಅರ್ಥಪೂರ್ಣ ಆಚರಣೆಗೆ ನಿರ್ಧಾರ

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪಟ್ಟಣದಲ್ಲಿ ಇದೇ ಅಕ್ಟೋಬರ್ 23ರಂದು ವೀರರಾಣಿ ಕಿತ್ತೂರು ಚೆನ್ನಮ್ಮಾಜಿ ಜಯಂತಿ ಹಾಗೂ ನವಂಬರ್ 1ರಂದು ಆಚರಿಸಲ್ಪಡುವ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ತಾಲೂಕ ಆಡಳಿತದ ವತಿಯಿಂದ ಅರ್ಥಪೂರ್ಣ ಹಾಗೂ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ತಾಲೂಕ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಅಧ್ಯಕ್ಷರು ಹಾಗೂ ತಹಸಿಲ್ದಾರರು ಆದ ಎಂ.ಎಸ್.ಅರಕೇರಿ ತಿಳಿಸಿದರು.

ಸರ್ಕಾರಿ ಕನ್ನಡ ಶಾಲೆ ಸಭಾಂಗಣದಲ್ಲಿ ಸೋಮವಾರ ಕಿತ್ತೂರು ಚೆನ್ನಮ್ಮ ಜಯಂತಿ ಹಾಗೂ ಕನ್ನಡ ರಾಜ್ಯೋತ್ಸವ ಆಚರಣೆ ಕುರಿತಂತೆ ಕರೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಚೆನ್ನಮ್ಮಾಜಿ ಜಯಂತಿ ಅಂಗವಾಗಿ ಅಕ್ಟೋಬರ್ 23ರಂದು ಬೆಳಿಗ್ಗೆ 09:00 ಘಂಟೆಗೆ ಪಟ್ಟಣದ ಕಿತ್ತೂರಾಣಿ ಚೆನ್ನಮ್ಮ ವೃತ್ತದಲ್ಲಿ ಹಾಗೂ ಬೆಳಿಗ್ಗೆ 10:00 ಘಂಟೆಗೆ ತಹಸಿಲ್ದಾರ್ ಕಾರ್ಯಾಲಯದಲ್ಲಿ ಪೂಜೆ ಸಲ್ಲಿಸಲಾಗುವುದು. ಇದರ ಜೊತೆಗೆ ಬೆಳಿಗ್ಗೆ 8:00 ಗಂಟೆಗೆ ಎಲ್ಲಾ ಸರ್ಕಾರಿ ಕಚೇರಿ, ಶಾಲೆ-ಕಾಲೇಜುಗಳಲ್ಲಿ ಕಿತ್ತೂರು ಚೆನ್ನಮ್ಮಾಜೀಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಗೌರವಿತವಾಗಿ ಆಚರಿಸಲಾಗುವುದು. ಸಮುದಾಯದ ಅಧ್ಯಕ್ಷರು, ಮುಖಂಡರು ಹಾಗೂ



ಎಲ್ಲಾ ಸಮಾಜದ ಗಣ್ಯರು ತಪ್ಪದೆ ಆಗಮಿಸಿ ಯಶಸ್ವಿಗೊಳಿಸಿ ಕೊಡಬೇಕೆಂದು ಕೋರಿದರು.

ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಅದ್ದೂರಿಯಾಗಿ ನಡೆಸಲಾಗುವುದು ಎಂದು ತಿಳಿಸಿದ ಅವರು ಕಳೆದ ವರ್ಷ ತೆಗೆದುಕೊಂಡ ಎಲ್ಲ ಕಾರ್ಯಕ್ರಮಗಳ ಜೊತೆಗೆ ಈ ಬಾರಿ ವಿಶೇಷ ರೀತಿಯಲ್ಲಿ ಆಚರಿಸಲಿಕ್ಕಾಗಿ ಕಾರ್ಯಕ್ರಮದ ರೂಪ ರೇಷೆಗಳನ್ನು ಸಿದ್ಧಪಡಿಸಲು ಅಕ್ಟೋಬರ್ 23 ರಂದು ಮಧ್ಯಾಹ್ನ 3-00 ಘಂಟೆಗೆ ಪಟ್ಟಣದ ಎಲ್ಲಾ ಸಮಾಜಗಳ ಪ್ರಮುಖರ, ಸಂಘ ಸಂಸ್ಥೆಗಳ ಮುಖ್ಯಸ್ಥರ ಹಾಗೂ ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳ ಇನ್ನೊಂದು ಸಿದ್ಧತಾ ಸಭೆ ನಡೆಸಲಾಗುವುದು ಇದರಲ್ಲಿ ಎಲ್ಲಾ ಇಲಾಖೆಗಳ ತಾಲೂಕ ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಭಾಗವಹಿಸುವರು ಎಂದರು.

ಸಿ ಆರ್ ಸಿ ರಾಜು ವಿಜಾಪುರ ಅವರು ಕಾರ್ಯಕ್ರಮದ ರೂಪ ರೇಷೆಗಳ ಬಗ್ಗೆ ಸಭೆಗೆ ತಿಳಿಸಿದರು. ಸಭೆಯಲ್ಲಿ ಉಪಸ್ಥಿತ ಸಮಾಜದ ಮುಖಂಡರು ಕಾರ್ಯಕ್ರಮದ ಯಶಸ್ವಿಗೆ



ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು. ಸಭೆಯಲ್ಲಿ ಕ್ಷೇತ್ರ ಸಮನ್ವಯ ಅಧಿಕಾರಿ ಆರ್ ಬಿ ದಮ್ಮೂರಮಠ, ಪಂಚಮಸಾಲಿ ಸಮಾಜದ ಅಧ್ಯಕ್ಷ ಡಾ. ವಿ. ಎಸ್.ಕಾರ್ಚಿ, ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಎ.ಜಿ.ಬಿರಾದಾರ, ಕಸಾಪ ಅಧ್ಯಕ್ಷ ಆರ್ ಎಲ್ ಕೊಪ್ಪದ, ಮಾಜಿ ಉಪ ತಹಶೀಲ್ದಾರ ಜಿ.ಜಿ.ಮದರಕಲ್ಲ, ಕಾಶಿನಾಥ ಮುರಾಳ, ವೀರೇಶಗೌಡ ಬಾಗೇವಾಡಿ, ಮಡುಸೌಕಾರ ಬಿರಾದಾರ, ಶಿವಶಂಕರ ಹಿರೇಮಠ, ಗಂಗಾಧರ ಕಸ್ತೂರಿ,ಡಿ.ಕೆ.ಪಾಟೀಲ, ಪ್ರಭು ಬಿಳೇಭಾವಿ, ಶರಣಗೌಡ ಗೊಟಗುಣಕಿ, ಜಗದೀಶ ಬಿಳೇಭಾವಿ,ಪ್ರಕಾಶ ಸಾಸಾಬಾಳ, ಅಬೂಬಕರ್ ಲಾಹೋರಿ,ಅಪ್ಪು ಪಾಟೀಲ, ನಿಂಗಣ್ಣ ಕುಂಟೋಜಿ, ಮಲ್ಲಿಕಾರ್ಜುನ ಹಿಪ್ಪರಗಿ, ತಾಲೂಕ ಮಟ್ಟದ ಅಧಿಕಾರಿಗಳು ಹಾಗೂ ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳು ಇದ್ದರು.

ಅಯೋಧ್ಯೆಯ ರಾಮ ಲಲ್ಲಾ ದರ್ಶನಕ್ಕೆ ಹೊಸ ವ್ಯವಸ್ಥೆ

ನೈಜ್ಯ ದೆಸೆ ನ್ಯೂಸ್

ಲಕ್ನೋ: ಅಯೋಧ್ಯೆಯ ರಾಮಮಂದಿರದಲ್ಲಿ ಪ್ರತಿಷ್ಠಾಪಿಸಲಾಗಿರುವ ರಾಮಲಲ್ಲಾನ ದರ್ಶನದ ವ್ಯವಸ್ಥೆಯಲ್ಲಿ ಭಾರಿ ಬದಲಾವಣೆ ಮಾಡಲಾಗಿದೆ. ಇನ್ನು ಮುಂದೆ ಭಕ್ತರು 90 ದಿನಗಳ ಮುಂಚಿತವಾಗಿಯೇ ಸುಗಮ ದರ್ಶನ ಪಾಸ್‌ಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ತಿಳಿಸಿದೆ.



ಈ ಹಿಂದೆ ಕೇವಲ 15 ದಿನಗಳ ಮುಂಚಿತವಾಗಿ ಮಾತ್ರ ಪಾಸ್ ಪಡೆಯಲು ಅವಕಾಶವಿತ್ತು. ಆನ್‌ಲೈನ್ ಮೂಲಕ ವಿತರಿಸುವ ಪಾಸ್‌ಗಳ ಸಂಖ್ಯೆಯನ್ನು 975 ರಿಂದ 2,000ಕ್ಕೆ ಹೆಚ್ಚಿಸಲಾಗಿದೆ. 90, 62, 30, 14, 7, 3 ಮತ್ತು 1 ದಿನಗಳ ಮುಂಚಿತವಾಗಿ ಒಟ್ಟು 7 ಹಂತಗಳಲ್ಲಿ ಪಾಸ್‌ಗಳನ್ನು ಬಿಡುಗಡೆ ಮಾಡಲಾಗುತ್ತದೆ. ಅಲ್ಲದೆ, ದರ್ಶನದ ದಿನವೇ ತುರ್ತು ಪಾಸ್ ಪಡೆಯುವ ಸೌಲಭ್ಯವೂ ಲಭ್ಯವಿರಲಿದೆ. ಮುಂಗಡ ಅರ್ಜಿಗಳ ಪರಿಶೀಲನೆ ಬಳಿಕ 24 ರಿಂದ 48 ಗಂಟೆಗಳ ಒಳಗಾಗಿ ಪಾಸ್ ದೃಢೀಕರಣದ ಮಾಹಿತಿ ನೀಡಲಾಗುತ್ತದೆ. ಸುಗಮ ದರ್ಶನ ಪಾಸ್ ಸಂಪೂರ್ಣ ಉಚಿತವಾಗಿದ್ದು, ಇದಕ್ಕಾಗಿ ಯಾವುದೇ ಹಣ ಪಾವತಿಸುವ ಅಗತ್ಯವಿಲ್ಲ ಎಂದು ಟ್ರಸ್ಟ್ ಸ್ಪಷ್ಟಪಡಿಸಿದೆ.

ನಕಲಿ ವೈದ್ಯರು ಕೆಲವು ಔಷಧಿ ಅಂಗಡಿಗಳ ಸಂಯೋಗದೊಂದಿಗೆ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವುದು ಅಘಾತಕಾರಿಯಾಗಿದೆ:ಡಾ ನಂದಿತಾ ಎಮ್ ಎನ್

ನೈಜ್ಯ ದೆಸೆ ನ್ಯೂಸ್

ರಾಯಚೂರು: ಅಧಿಕೃತ ವೈದ್ಯ ಪದವಿ ಪಡೆಯದೆ ವೈದ್ಯ ವೃತ್ತಿ ಮಾಡುತ್ತಿದ್ದ ನಕಲಿ ವೈದ್ಯರ ಕ್ಲಿನಿಕ್‌ಗಳ ಮೇಲೆ ಜಿಲ್ಲೆಯಾದ್ಯಂತ ದಾಳಿ ಮಾಡಿ ಎಫ್‌ಐಆರ್ ದಾಖಲಿಸಲಾಗುತ್ತಿದೆ. ಆದರೆ ಸಾರ್ವಜನಿಕರಿಗೆ ಅಧಿಕೃತ ವೈದ್ಯರು ಸೂಚಿಸಿದ ಔಷಧಿಗಳನ್ನು ಮಾರಾಟ ಮಾಡಬೇಕಾದ ಔಷಧಿ ಅಂಗಡಿಗಳ ಕೆಲವು ಮಾಲಿಕರು, ತಮ್ಮ ಅಂಗಡಿಯ ಹಿಂಭಾಗ, ಒಳಭಾಗದಲ್ಲಿ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಿ ನಕಲಿ ವೈದ್ಯರಿಂದ ಚಿಕಿತ್ಸೆ ನೀಡಲು ಕ್ಲಿನಿಕ್ ಮಾಡಿದ್ದು, ಇಲಾಖೆಯ ದಾಳಿಯ ವೇಳೆ ಕಂಡು ಬಂದಿರುವುದು ಆತಂಕಕಾರಿಯಾಗಿದೆ ಎಂದು ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ನಂದಿತಾ ಎಮ್ ಎನ್ ತಿಳಿಸಿದ್ದಾರೆ.

ಮಾನವಿ ತಾಲೂಕಿನ ಬಾಗಲವಾಡ ಗ್ರಾಮದಲ್ಲಿ ನಕಲಿ ವೈದ್ಯರ ವಿರುದ್ಧದ ದಾಳಿಯ ವೇಳೆ ಸ್ಥಳೀಯ ಲಕ್ಷ್ಮೀ ಮೆಡಿಕಲ್ ಶಾಪ್‌ನ ಒಳಭಾಗದಲ್ಲಿ ಕ್ಲಿನಿಕ್ ನಡೆಸುತ್ತಿರುವುದು ಕಂಡು ಬಂದ ಹಿನ್ನಲೆ, ವೈದ್ಯಕೀಯ ದಾಖಲಾತಿಗಳ ಪರಿಶೀಲನೆ ವೇಳೆ ಯಾವುದೇ ವೈದ್ಯ ಪದವಿಯನ್ನು ಪಡೆಯದೆ ಇದ್ದುದು ಕಂಡು ಬಂದಿತು. ಮುಖ್ಯವಾಗಿ ಔಷಧಿ ಅಂಗಡಿ ತೆರಯಲು ಪರವಾನಿಗೆ ಪಡೆದವರು ಇನ್ನೊಬ್ಬರಿಗೆ ಔಷಧಿ ಅಂಗಡಿಯನ್ನು ನಡೆಸಲು ಅನಧಿಕೃತವಾಗಿ ಪರವಾನಿಗೆ ಕೊಟ್ಟಿರುವುದರಿಂದ ಮಾಲಿಕರು ಖುದ್ದು ಚಿಕಿತ್ಸೆ ನೀಡುತ್ತಿರುವುದು ಕಂಡು ಬರುತ್ತದೆ.

ಔಷಧಿ ಅಂಗಡಿಗಳಲ್ಲಿ ನಕಲಿ ವೈದ್ಯರು ಚಿಕಿತ್ಸೆ ನೀಡುತ್ತಿರುವ ಬಗ್ಗೆ ಮಾಹಿತಿ ಲಭ್ಯವಾಗುತ್ತಿರುವುದರಿಂದ ಔಷಧಿ ಅಂಗಡಿ ತೆರೆಯಲು ಪರವಾನಿಗೆ ನೀಡುವ ಔಷಧಿ ನಿಯಂತ್ರಣ ಇಲಾಖೆಯು ಖುದ್ದು ಪರಿಶೀಲನೆ ಕೈಗೊಂಡಲ್ಲಿ ಜಿಲ್ಲೆಯಲ್ಲಿ ನಕಲಿ



ವೈದ್ಯರು ವೈದ್ಯ ವೃತ್ತಿ ಮಾಡುವುದನ್ನು ತಡೆಯಬಹುದಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಸರ್ವೆಕ್ಷಣಾಧಿಕಾರಿ ಡಾ ಗಣೇಶ್ ಕೆ, ತಾಲೂಕಾ ಆರೋಗ್ಯಾಧಿಕಾರಿ ಡಾ ಶರಣಬಸವರಾಜ್ ಸೇರಿದಂತೆ ಉಪಸ್ಥಿತರಿದ್ದರು.

ಹದಿನಾರು ಗ್ರಾಮದಲ್ಲಿ ಜೆಡಿಎಸ್ ಪಕ್ಷದ ವತಿಯಿಂದ ಮಹಿಳೆಯರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ

ನೈಜ್ಯ ದೆಸೆ ನ್ಯೂಸ್

ವರದಿ ಟೀಕೆ ಬಸವರಾಜು ತಾಂಡವಪುರ ಅಕ್ಟೋಬರ್ 19 ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕ ಚಿಕ್ಕಯ್ಯನ ಛತ್ರ ಹೋಬಳಿ ವರುಣ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ಹದಿನಾರು ಗ್ರಾಮದಲ್ಲಿ ಜೆಡಿಎಸ್ ಪಕ್ಷದ ವತಿಯಿಂದ ಮಹಿಳೆಯ-ರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು.

ಶಿಬಿರದಲ್ಲಿ ಮಹಿಳೆಯರು ಹೆಚ್ಚಾಗಿ ಬಂದು ವೈದ್ಯರಲ್ಲಿ ತಮ್ಮ ಆರೋಗ್ಯವನ್ನು ತಪಾಸಣೆ ಮಾಡಿಸಿಕೊಳ್ಳುತ್ತಿರುವುದು ಕಂಡುಬಂತು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ವಿಧಾನ ಪರಿಷತ್ ಸದಸ್ಯರಾದ ಮಂಜೇಗೌಡರವರು ಮಾತನಾಡುತ್ತಾ ಹದಿನಾರು ಗ್ರಾಮದಲ್ಲಿ ಈ ರೀತಿಯ ಉಚಿತ



ಮಹಿಳಾ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಿ ಗ್ರಾಮೀಣ ಮಹಿಳೆಯರಿಗೆ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ನಡೆಸುತ್ತಿರುವುದು ತುಂಬಾ ಶ್ಲಾಘನೀಯ ವಿಚಾರವಾಗಿದೆ.

ಈ ಸೌಲಭ್ಯವನ್ನು ಎಲ್ಲಾ ಮಹಿಳೆಯರು ಸದುಪಯೋಗ ಪಡಿಸಿಕೊಂಡು ಆರೋಗ್ಯವನ್ನು ಉತ್ತಮ ಪಡಿಸಿಕೊಂಡು ಆರೋಗ್ಯವಂತ ಕುಟುಂಬವನ್ನು ಹೊಂದಬೇಕೆಂದು ಕರೆ ನೀಡಿದರಲ್ಲದೇ, ಈ ಭಾಗದಲ್ಲಿ ಜನ ಸೇವೆ ಮಾಡಲು ಆಸಕ್ತಿಯುಳ್ಳ ಅಭಿಷೇಕ್ ಮಣಿಗಾರ್ ರವರಿಗೆ ನಿಮ್ಮ ಆಶೀರ್ವಾದ ಸದಾ ಇರಲಿ ಎಂದು ವಿನಂತಿಸಿದರು. ಈ ನಿಟ್ಟಿನಲ್ಲಿ ಜೆಡಿಎಸ್ ಮುಖಂಡರಾಗಿರುವ ಅಭಿಷೇಕ್ ಮಣಿಗಾರ್‌ರವರು ಇಂತಹ ಕಾರ್ಯಕ್ರಮವನ್ನು ಆಯೋಜಿಸಿರುವುದು ತುಂಬಾ ಅಭಿನಂದಾನಾರ್ಹವಾಗಿದೆ ಎಂದು ಮಂಜೇಗೌಡರು ಮೆಚ್ಚುಗೆ ವ್ಯಕ್ತಪಡಿಸಿದರು ಈ ಕಾರ್ಯಕ್ರಮದಲ್ಲಿ ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞರಾದ ಡಾ। ಲೀಲಾವತಿ-ರವರು ಭಾಗವಹಿಸಿ ಮಾತನಾಡುತ್ತಾ, ನಮ್ಮ ಕುಟುಂಬವೆಲ್ಲ ವರುಣ ಕ್ಷೇತ್ರಕ್ಕೆ ಸೇರಿರುವುದರಿಂದ ನಿಮ್ಮ ಆಶೀರ್ವಾದ ನಮ್ಮ ಮೇಲೆ ಸದಾ ಇರಲಿ ಎಂದು ಕೇಳಿಕೊಂಡರು, ನಮ್ಮ ಗ್ರಾಮೀಣ ಭಾಗದ ಮಹಿಳೆಯರಿಗಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದ್ದು, ಮಹಿಳೆಯ-ರಿಗೆ ಯಾವುದೇ ರೋಗದ ಸಮಸ್ಯೆ ಬಂದರೂ ನಾವು ಚಿಕಿತ್ಸೆ ನೀಡಲು ಸಿದ್ದರಿದ್ದೇವೆ ಎಂದು ತಿಳಿಸಿದರು.

ಇದೇ ವೇಳೆ ಜೆಡಿ-ಎಸ್ ಮುಖಂಡರಾದ ಅಭಿಷೇಕ್ ಮಣಿಗಾರ್‌ರವರು ಮಾತನಾಡಿ ಗ್ರಾಮೀಣ ಭಾಗದ ಮಹಿಳೆಯರ ಆರೋಗ್ಯದಲ್ಲಿ ಸಾಕಷ್ಟು ಸಮಸ್ಯೆಗಳು ಕಂಡು ಬಂದರೂ ಸೂಕ್ತ ವೈದ್ಯಕೀಯ ಸೇವೆಗಳು ಸಿಗದಿರುವುದರಿಂದ ಜನರಿಗೆ ಬಹಳಷ್ಟು ತೊಂದರೆಯಾಗುತ್ತಿದೆ. ಇದನ್ನು ಮನಗಂಡು ನಾವು ಗ್ರಾಮೀಣ ಭಾಗದಲ್ಲಿ ಮಹಿಳೆಯರ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸುತ್ತಿದ್ದೇವೆ. ಇಂತಹ ಶಿಬಿರಗಳ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಮಹಿಳೆಯರಿಗೆ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಶ್ರೀ ಮಠದ ಗುರುಮಲ್ಲೇದೇವರು ಪ್ರೊಫೆಸರ್, ಬೊಕ್ಕಳ್ಳಿ ಸುಬ್ಬಪ್ಪ, ನಾಡಗೌಡರ ಸಿದ್ದಪ್ಪ ಡಾ.ಎಸ್ ರವಿಕುಮಾರ್, ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞರಾದ ಡಜಿ ಲೀಲಾವತಿ, ಗ್ರಾ.ಪಂ ಮಂಜಿ ಅಧ್ಯಕ್ಷ ಅಭಿ, ಮಾಜಿ ಗ್ರಾಪಂ ಅಧ್ಯಕ್ಷ ಬಸವಣ್ಣಣ್ಣ, ಪ್ರಮಥ,ಗ್ರಾಮದ ಮುಖಂಡ ಶಿವಣ್ಣ, , ಎ.ಪಿ.ಎಂ.ಸಿ ಸದಸ್ಯ ಶಾಂಭೌಮೂರ್ತಿ, ರಾಜಣ್ಣ, ಜಿ.ಮರಳ್ಳಿ ರೇವಣ್ಣ, ಕುಮಾರ್, ಶೇಖರ್, ಸತೀಶ, ಲೋಕೇಶ, ಮಹೇಶ ಮುಳ್ಳೂರು, ಶೇಖರ್ ಮುಳ್ಳೂರು, ಸೇ-ರಿದಂತೆ ಹದಿನಾರು ಸುತ್ತ ಮುತ್ತಲ ಗ್ರಾಮಗಳ ಸಾವಿರಾರು ಮಹಿಳೆಯರು ಹಾಗೂ ಮುಖಂಡರುಗಳು ಉಚಿತ ಆರೋಗ್ಯ ಶಿಬಿರದಲ್ಲಿ ಭಾಗಿಯಾಗಿದ್ದರು

ವಚನ ದರ್ಶನ

ನಾನೊಂದ ನೆನೆದೊಡೆ ತಾನೊಂದ ನೆನೆವುದು,ನಾನಿತ್ತಲೆಳೆದೊಡೆ
ತಾನತ್ತಲೆಳೆವುದು.ತಾ ಬೇರೆ ಎನ್ನನಳಲಿಸಿ ಕಾಡಿತ್ತು,ತಾ
ಬೇರೆ ಎನ್ನ ಬಳಲಿಸಿ ಕಾಡಿತ್ತು.ಕೂಡಲ ಸಂಗನ
ಕೂಡಿಹೆನೆಂದೊಡೆತಾನೆನ್ನ ಮುಂದುಗೆಡಿಸಿತ್ತು ಮಾಯೆ!

ನಾನೊಂದ ನೆನೆದೊಡೆ ತಾನೊಂದ ನೆನೆವುದು'' ಎಂಬುದು 12ನೇ ಶತಮಾನದ ಸಾಮಾಜಿಕ ಹಾಗೂ ಧಾರ್ಮಿಕ ಕ್ರಾಂತಿಯ ಹರಿಕಾರ, ವಿಶ್ವಗುರು ಬಸವಣ್ಣನವರ ಒಂದು ಅತ್ಯಂತ ಜನಪ್ರಿಯ ಮತ್ತು ಅರ್ಥಗರ್ಭಿತ ವಚನವಾಗಿದೆ.ಲೋಕರೂಢಿಯಲ್ಲಿ ಈ ಸಾಲನ್ನು ನಾವು ಯಾವುದಾದರೂ ಅಂದುಕೊಂಡ ಕೆಲಸವು ಅಡ್ಡಿ–ಆತಂಕಗಳಿಂದ ಅಂದುಕೊಂಡಂತೆ ಆಗದಿದ್ದಾಗ "ನಾನೊಂದು ನೆನೆದರೆ ದೈವವೊಂದು ನೆನೆದಂತೆ" ಎಂಬ ಗಾದೆಯ ರೂಪದಲ್ಲೂ ಬಳಸುತ್ತೇವೆ. ಆದರೆ, ಬಸವಣ್ಣನವರು ಈ ವಚನದಲ್ಲಿ ಮಾನವನ ಮನಸ್ಸಿನ ಚಂಚಲತೆ ಮತ್ತು 'ಮಾಯೆ'ಯ ಪ್ರಭಾವವನ್ನು ಅದ್ಭುತವಾಗಿ ಚಿತ್ರಿಸಿದ್ದಾರೆ.

ಪಂಪಯ್ಯಸ್ವಾಮಿ ಸಾಲಿಮಠ ಅಂತರಗಂಗಿ– ಸಿಂಧನೂರು. 998094144

ನವರಾತ್ರಿ ಉತ್ಸವ ಉಡಿ ತುಂಬುವ ಕಾರ್ಯಕ್ರಮ

❏ ನೈಜ್ಯ ದೆಸೆ ನ್ಯೂಸ್

ಮಸ್ಕಿ : ಪಟ್ಟಣದಲ್ಲಿ ನವರಾತ್ರಿ ಉತ್ಸವದ ಅಂಗವಾಗಿ ಹತ್ತಾರು ಕಾರ್ಯಕ್ರಮಗಳು, ನಾಡಿನ ಹೆಮ್ಮೆಯ ಪ್ರತೀಕವಾದ ನಮ್ಮ ಪರೆಂಪರೆ ಬೆಸಯುವ ಹಬ್ಬ ಉತ್ಸವಗಳು ಮನೆಮಾತಾಗಿವೆ ಹೀಗಾಗಿ ಮಸ್ಕಿ ಪಟ್ಟಣದಲ್ಲಿ ಸಹ ಶ್ರೀ ಕಾಳಿಕಾ ದೇವಿ ದೇವಸ್ಥಾನದಲ್ಲಿ ಸೋಮವಾರ ಬಾಲ ಮಕ್ಕಳ ಮುತ್ತೈದೆಯ–ರಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಿತು.



ದೇವಸ್ಥಾನದಲ್ಲಿ ಪ್ರತಿನಿತ್ಯ ಕುಂಕುಮಾರ್ಚನೆ, ಪುಷ್ಪಾರ್ಚನೆ, ಬಿಲ್ವಾರ್ಚನೆ, ನೈವೇದ್ಯ ಅರ್ಪಣೆ ಕಾರ್ಯಗಳು ನಡೆಯುತ್ತಿವೆ. ದೇವಿ ಮೂರ್ತಿಗೆ ವಿವಿಧ ಹೂವಿನ ಅಲಂಕಾರವನ್ನು ಮಾಡಲಾಗುತ್ತಿದೆ. ಸೋಮವಾರ ಶ್ರೀ ಕಾಳಿಕಾ ದೇವಿ ಮೂರ್ತಿಗೆ ವಿಶೇಷವಾಗಿ ಸಿಂಗರಿಸಿ ಪೂಜೆ ಸಲ್ಲಿಸಿ ಬಾಲ ಮಕ್ಕಳ ಮುತ್ತೈದೆಯರಿಗೆ ಉಡಿ ತುಂಬಲಾಯಿತು. ಈ ಸಂದರ್ಭದಲ್ಲಿ ಮಸ್ಕಿ ಪಟ್ಟಣ ಮತ್ತು ತಾಲೂಕಿನ ವಿಶ್ವಕರ್ಮ ಸಮಾಜದವರು, ಮಹಿಳೆಯರು,ಇನ್ನಿತರರು ಸೇರಿದಂತೆ ಭಾಗವಹಿಸಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಮಾನ್ವಿ ತಾಲೂಕಿನಲ್ಲಿ 29 ಶಿಕ್ಷಕ ಮತದಾರರಿಗೆ ಅನ್ಯಾಯ ಆರೋಪ

ಕರಡು ಮತದಾರರ ಪಟ್ಟಿಯಿಂದ ಹೆಸರು ಕೈಬಿಟ್ಟಿರುವುದಕ್ಕೆ ಆಕ್ರೋಶ; ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

❏ ನೈಜ್ಯ ದೆಸೆ ನ್ಯೂಸ್

ಮಾನ್ವಿ: ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ 2026ರ ಚುನಾವಣೆಗೆ ಸಂಬಂಧಿಸಿದ ಮತದಾರರ ಪಟ್ಟಿಯಿಂದ ಮಾನ್ವಿ ತಾಲೂಕಿನ 29 ಶಿಕ್ಷಕ ಮತದಾರರ ಹೆಸರುಗಳನ್ನು ಕೈಬಿಡಲಾಗಿದೆ ಎಂದು ಆರೋಪಿಸಲಾಗಿದ್ದು, ಇದರಿಂದ ಶಿಕ್ಷಕರಿಗೆ ಅನ್ಯಾಯವಾಗಿದೆ ಎಂಬ ಆಕ್ರೋಶ ವ್ಯಕ್ತವಾಗಿದೆ.

ಲಭ್ಯವಿರುವ ಮಾಹಿತಿಯ ಪ್ರಕಾರ, ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಸಂಬಂಧಿಸಿದ ಕರಡು ಮತದಾರರ ಪಟ್ಟಿಯಲ್ಲಿ ಒಟ್ಟು 392 ಶಿಕ್ಷಕ ಮತದಾರರು ನೋಂದಣಿಯಾಗಿದ್ದರು. ಇವರಲ್ಲಿ 262 ಪುರುಷರು ಹಾಗೂ 130 ಮಹಿಳಾ ಮತದಾರರು ಇದ್ದರು. ಆದರೆ, ತಹಸೀಲ್ದಾರ್ ಕಚೇರಿಯ ಚುನಾವಣಾ ವಿಭಾಗದಿಂದ ಪ್ರಕಟಿಸಲಾದ ಅಂತಿಮ ಪಟ್ಟಿಯಲ್ಲಿ ಒಟ್ಟು 363 ಮತದಾರರ ಹೆಸರುಗಳು ಮಾತ್ರ ಸೇರ್ಪಡೆಯಾಗಿವೆ.



ಈ ಪೈಕಿ 246 ಪುರುಷರು ಹಾಗೂ 117 ಮಹಿಳೆಯರಿದ್ದಾರೆ ಎಂದು ದೂರಲಾಗಿದೆ. ಕರಡು ಪಟ್ಟಿಯಲ್ಲಿದ್ದ 29 ಮತದಾರರ ಹೆಸರುಗಳು ಅಂತಿಮ ಪಟ್ಟಿಯಲ್ಲಿ ಕಾಣೆಯಾಗಿದ್ದು, ಇವರಲ್ಲಿ 16 ಪುರುಷರು ಹಾಗೂ 13 ಮಹಿಳೆಯರು ಸೇರಿದ್ದಾರೆ. ಚುನಾವಣಾ ವಿಭಾಗದ ಸಿಬ್ಬಂದಿಯ ನಿರ್ಲಕ್ಷ್ಯ ಹಾಗೂ ತಹಸೀಲ್ದಾರರ ಬೇಜವಾಬ್ದಾರಿತನದಿಂದ ಈ ರೀತಿಯ ಲೋಪ ಸಂಭವಿಸಿದೆ ಎಂದು ಆರೋಪಿಸಲಾಗಿದೆ. ಶಿಕ್ಷಕರ ಕ್ಷೇತ್ರವನ್ನು ಪ್ರತಿನಿಧಿಸುವ ವಿಧಾನ ಪರಿಷತ್ ಸದಸ್ಯರ ಚುನಾವಣೆಯಲ್ಲಿ ಮತ ಚಲಾಯಿಸಲು ಅರ್ಹರಾಗಿರುವ ಶಿಕ್ಷಕರ ಹೆಸರುಗಳನ್ನು ಅವರ ಗಮನಕ್ಕೆ ತಾರದೆ ಮತದಾರರ ಪಟ್ಟಿಯಿಂದ ಕೈಬಿಟ್ಟಿರುವುದು ಖಂಡನೀಯ. ಮತದಾರರ ಪಟ್ಟಿಯಲ್ಲಿನ ಇಂತಹ ಲೋಪದಿಂದ 29 ಶಿಕ್ಷಕರು ತಮ್ಮ ಪ್ರಜಾಸತ್ತಾತ್ಮಕ ಹಕ್ಕಿನಿಂದ ವಂಚಿತರಾಗುವ ಆತಂಕ ಎದುರಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಸಂಬಂಧಪಟ್ಟ ಅಧಿಕಾ–ರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ ಮತದಾನದ ಹಕ್ಕು ಪ್ರಜಾಪ್ರಭುತ್ವದ ಪ್ರಮುಖ ಹಕ್ಕಾಗಿದ್ದು, ಅರ್ಹ ಶಿಕ್ಷಕರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈಬಿಟ್ಟಿರುವ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ಈ ಕುರಿತು ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥ ಅಧಿಕಾರಿಗಳು ಮತ್ತು ಸಿಬ್ಬಂದಿಯ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಅಲ್ಲದೆ, ಪಟ್ಟಿಯಿಂದ ಕೈಬಿಡಲಾದ 29 ಶಿಕ್ಷಕ ಮತದಾರರ ಹೆಸರುಗಳನ್ನು ಮರುಸೇರ್ಪಡೆಗೊಳಿಸಿ, ಅವರು ಮತ ಚಲಾಯಿಸಲು ಅವಕಾಶ ಕಲ್ಪಿಸಬೇಕು ಎಂದು ಸಂಬಂಧಪಟ್ಟ ಚುನಾವಣಾಧಿಕಾರಿಗಳಿಗೆ ಆಗ್ರಹಿಸಲಾಗಿದೆ. ಚುನಾವಣಾ ಪ್ರಕ್ರಿಯೆಯಲ್ಲಿ ಯಾವುದೇ ಅರ್ಹ ಮತದಾರರು ವಂಚಿತರಾಗದಂತೆ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು ಎಂಬುದು ಶಿಕ್ಷಕ ಮತದಾರರ ಒತ್ತಾಯವಾಗಿದೆ.


ವರದಿ :ಆಂಜನೇಯ ನಸಲಾಪುರ

ಅಮೆರಿಕ ನಮ್ಮ ಷರತ್ತುಗಳನ್ನು ಒಪ್ಪಿದರೆ 7 ದಿನಗಳಲ್ಲಿ ಹಾರ್ಮುಜ್ ಮುಕ್ತ ; ಇರಾನ್ ಘೋಷಣೆ

❏ ನೈಜ್ಯ ದೆಸೆ ನ್ಯೂಸ್

ಟೆಹ್ರಾನ್: ಅಮೆರಿಕ ತನ್ನ ಕಠಿಣ ನಿರ್ಬಂಧಗಳನ್ನು ಸಡಿಲಿಸಿದರೆ ಹಾರ್ಮುಜ್ ಜಲಸಂಧಿಯನ್ನು ಕೇವಲ ಒಂದು ವಾರದೊಳಗೆ ಮುಕ್ತಗೊಳಿಸಲಾಗುವುದು ಎಂದು ಇರಾನ್ ಘೋಷಿಸಿದೆ. ಅಮೆರಿಕ ತನ್ನ ಕಠಿಣ ನಿರ್ಬಂಧಗಳನ್ನು ಸಡಿಲಿಸಬೇಕು ಮತ್ತು ತನ್ನ ಷರತ್ತುಗಳನ್ನು ಈಡೇರಿಸಬೇಕು ಎಂಬ ಒಪ್ಪಂದದ ಮಾರ್ಗಸೂಚಿಯನ್ನು ಟೆಹ್ರಾನ್ ಮುಂದಿಟ್ಟಿದೆ.

ಕತಾರ್ ದೇಶದ ಮಧ್ಯಸ್ಥಿಕೆಯ ಮೂಲಕ ಈ ಪ್ರಸ್ತಾವನೆಯನ್ನು ವಾಷಿಂಗ್ಟನ್‌ಗೆ ತಲುಪಿಸಲಾಗಿದೆ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ಮಾಹಿತಿ ನೀಡಿದ್ದಾರೆ. "ಅಮೆರಿಕವು ಇರಾನ್ ವಿಧಿಸಿರುವ ಷರತ್ತುಗಳನ್ನು ಅಧಿಕೃತವಾಗಿ ಒಪ್ಪಿಕೊಂಡರೆ, ಒಪ್ಪಿಗೆಯಾದ 6ನೇ ದಿನದಂದು ಹಾರ್ಮುಜ್ ಜಲಸಂಧಿಯ ಮೂಲಕ ಸಾಮಾನ್ಯ ವಾಣಿಜ್ಯ



ನೌಕಾ ಸಂಚಾರವನ್ನು ಪುನರಾರಂಭಿಸಲಾಗುತ್ತದೆ. ಜಲಸಂಧಿ ಮುಕ್ತವಾದ ಮರುದಿನವೇ (7ನೇ ದಿನ) ಅಮೆರಿಕ ಮತ್ತು ಇರಾನ್ ನಡುವೆ ನೇರ ರಾಜತಾಂತ್ರಿಕ ಮಾತುಕತೆಗಳು ಆರಂಭವಾಗಲಿವೆ" ಎಂದು ಅರಘ್ಚಿ ಹೇಳಿದ್ದಾರೆ. ಇರಾನ್ ಮೇಲೆ ಮಿಲಿಟರಿ ಒತ್ತಡ ಮತ್ತು ನೌಕಾ ನಿರ್ಬಂಧಗಳನ್ನು ಮುಂದುವ–ರಿಸುತ್ತಲೇ, ಜಲಸಂಧಿಯಲ್ಲಿ ಸರಕು ಸಾಗಣೆ ಸರಾಗವಾಗಿರಬೇಕು ಎಂದು ಅಮೆರಿಕ ನಿರೀಕ್ಷಿಸುವುದು ಅಸಾಧ್ಯ ಎಂದು ಅವರು ಗುಡುಗಿದ್ದಾರೆ.

ಇರಾನ್‌ನ ಪ್ರಮುಖ ಬಂದರುಗಳ ಮೇಲೆ ಅಮೆರಿಕ ಮತ್ತು ಮಿತ್ರರಾಷ್ಟ್ರಗಳು ವಿಧಿಸಿರುವ ನೌಕಾ ತಡೆಗೋಡೆಗಳನ್ನು ತಕ್ಷಣವೇ ಹಿಂಪಡೆಯಬೇಕು ಎಂದು ಅವರು ಆಗ್ರಹಿಸಿದ್ದಾರೆ. ಇದಲ್ಲದೆ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇರಾನ್ ತನ್ನ ಕಚ್ಚಾ ತೈಲವನ್ನು ಯಾವುದೇ ಅಡೆತಡೆಯಿಲ್ಲದೆ ಮಾರಾಟ ಮಾಡಲು ಅನುಮತಿ ನೀಡಬೇಕು ಹಾಗೂ ಲೆಬನಾನ್ ಮತ್ತು ಗಾಜಾ ವ್ಯಾಪ್ತಿಯಲ್ಲಿ ತಕ್ಷಣವೇ ಸಂಪೂರ್ಣ ಕದನ ವಿರಾಮ ಜಾರಿಗೆ ತರಬೇಕು ಎಂದು ಇರಾನ್ ಷರತ್ತು ವಿಧಿಸಿದೆ.

ಜಾಗತಿ–ಕ ತೈಲ ಮಾರುಕಟ್ಟೆಯ ಮೇಲೆ ಪರಿಣಾಮ: ಹಾರ್ಮುಜ್ ಜಲಸಂಧಿಯು ಪರ್ಷಿಯನ್ ಕೊಲ್ಲಿಯನ್ನು ಒಮಾನ್ ಕೊಲ್ಲಿ ಮತ್ತು ಅರಬ್ಬಿ ಸಮುದ್ರದೊಂದಿಗೆ ಸಂಪರ್ಕಿಸುವ ಅತ್ಯಂತ ಕಿರಿದಾದ ಜಲಮಾರ್ಗವಾಗಿದೆ. ವಿಶ್ವದಲ್ಲಿ ಸಮುದ್ರ ಮಾರ್ಗದ ಮೂಲಕ ಸಾಗಣೆಯಾಗುವ ಒಟ್ಟು ಕಚ್ಚಾ ತೈಲದ ಸುಮಾರು ಶೇ. 20 ರಿಂದ 25 ರಷ್ಟು ಭಾಗ ಇದೇ ಜಲಸಂಧಿಯ ಮೂಲಕವೇ ಹಾದುಹೋಗುತ್ತದೆ. ಈ ಮಾರ್ಗದಲ್ಲಿ ಸಣ್ಣ ವ್ಯತ್ಯಯ ಉಂಟಾದರೂ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಗಗನಕ್ಕೇರುತ್ತದೆ.

ಇದು ಭಾರತವೂ ಸೇರಿದಂತೆ ಪ್ರಮುಖ ಆಮದುದಾರ ದೇಶಗಳಲ್ಲಿ ತೈಲ ಬೆಲೆ ಏರಿಕೆ, ಸಾರಿಗೆ ವೆಚ್ಚದ ಹೆಚ್ಚಳ ಮತ್ತು ಹಣದುಬ್ಬರಕ್ಕೆ ನೇರ ಕಾರಣವಾಗುತ್ತದೆ. ಪ್ರಸ್ತುತ ಇರಾನ್ ರಾಜತಾಂತ್ರಿಕ ಬಾಗಿಲನ್ನು ತೆರೆದಿಟ್ಟಿದ್ದು, ಜಲಮಾರ್ಗ ಸುಗಮವಾಗುವುದೋ ಅಥವಾ ಬಿಕ್ಕಟ್ಟು ಮತ್ತಷ್ಟು ಉಲ್ಬಣಗೊಳ್ಳುವುದೋ ಎಂಬುದು ವಾಷಿಂಗ್ಟನ್ ಕೈಗೊಳ್ಳುವ ಅಂತಿಮ ನಿರ್ಧಾರದ ಮೇಲೆ ನಿಂತಿದೆ.

ಭಕ್ತರ ಮೇಲೆ ನುಗ್ಗಿದ ಲಾರಿ, 13 ಮಂದಿ ಸಾವು, 40ಕ್ಕೂ ಹೆಚ್ಚು ಮಂದಿಗೆ ಗಾಯ

❏ ನೈಜ್ಯ ದೆಸೆ ನ್ಯೂಸ್

ಗ್ವಾಲಿಯರ್: ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ಭಾನುವಾರ ನಸುಕಿನ ಜಾವ ಭೀಕರ ರಸ್ತೆ ಅಪಘಾತ ಸಂಭವಿಸಿದ್ದು, ಶೀತಲಮಾತಾ ದೇವಸ್ಥಾನದ ಸಮೀಪ ಕಾಯುತ್ತಿದ್ದ ಭಕ್ತರ ಮೇಲೆ ಲಾರಿ ನುಗ್ಗಿದ ಪರಿಣಾಮ 13 ಮಂದಿ ಮೃತಪಟ್ಟಿದ್ದಾರೆ. ಸುಮಾರು 40 ಮಂದಿ ಗಾಯಗೊಂಡಿದ್ದು, ಅವರಲ್ಲಿ ನಾಲ್ಕೈದು ಮಂದಿಯ ಸ್ಥಿತಿ ಗಂಭೀರವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಿಯಂತ್ರಣ ತಪ್ಪಿ ಭಕ್ತರ ಮೇಲೆ ನುಗ್ಗಿದ ಲಾರಿ ಭಾನುವಾರ ನಸುಕಿನ ಜಾವ ಸುಮಾರು 1.30ರ ವೇಳೆಗೆ ಶೀತಲಮಾತಾ ಮಂದಿರ ರಸ್ತೆಯಲ್ಲಿ ಈ ದುರ್ಘಟನೆ ಸಂಭವಿಸಿದೆ. ಭತ್ತ ತುಂಬಿಕೊಂಡು ಸಾಗುತ್ತಿದ್ದ ಲಾರಿಯ ಚಾಲಕ ವಾಹನದ ಮೇಲಿನ ನಿಯಂತ್ರಣ ಕಳೆದುಕೊಂಡ ಪರಿಣಾಮ ರಸ್ತೆಬದಿಯಲ್ಲಿ ನಿಂತಿದ್ದ ಹಾಗೂ ಕುಳಿತಿದ್ದ ಭಕ್ತರ ಮೇಲೆ ಲಾರಿ ನುಗ್ಗಿದೆ. ಬಳಿಕ ದೇವಸ್ಥಾನದ



ಗೋಡೆಗೆ ಡಿಕ್ಕಿ ಹೊಡೆದ ನಂತರ ಲಾರಿ ನಿಂತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸ್ಥಳದಲ್ಲೇ 13 ಮಂದಿ ಸಾವು ಅಪಘಾತದ ಕುರಿತು ಮಾಹಿತಿ ನೀಡಿರುವ ಗ್ವಾಲಿಯರ್ ಪೊಲೀಸ್ ವರಿಷ್ಠಾಧಿಕಾರಿ ಧರ್ಮವೀರ್ ಯಾದವ್, ಶೀತಲಮಾತಾ ದೇವಸ್ಥಾನದ ಸಮೀಪ ರಸ್ತೆಬದಿಯಲ್ಲಿ ಕಾಯುತ್ತಿದ್ದ ಭಕ್ತರಿಗೆ ನಿಯಂತ್ರಣ ತಪ್ಪಿದ ಭತ್ತ ತುಂಬಿದ ಲಾರಿ ಡಿಕ್ಕಿ ಹೊಡೆದ ಪರಿಣಾಮ 13 ಮಂದಿ ಮೃತಪಟ್ಟಿದ್ದಾರೆ ಎಂದು ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಅಪಘಾತದಲ್ಲಿ ಸುಮಾರು 40 ಮಂದಿ ಗಾಯಗೊಂಡಿದ್ದು, ಅವರಲ್ಲಿ ನಾಲ್ಕ–ರಿಂದ ಐದು ಮಂದಿಯ ಆರೋಗ್ಯ ಸ್ಥಿತಿ ಗಂಭೀರವಾಗಿದೆ ಎಂದು ಅವರು ಹೇಳಿದ್ದಾರೆ.

ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ರಕ್ಷಣಾ ಕಾರ್ಯಾಚರಣೆ ಅಪಘಾತದ ಮಾಹಿತಿ ತಿಳಿಯುತ್ತಿದ್ದಂತೆಯೇ ಪೊಲೀಸರು ಹಾಗೂ ರಕ್ಷಣಾ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಕಾರ್ಯಾಚರಣೆ ಆರಂಭಿಸಿದ್ದಾರೆ. ಹಿರಿಯ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ರಕ್ಷಣಾ ಕಾರ್ಯಾಚರಣೆ ಮುಂದುವ–ರಿದಿದ್ದು, ಗಾಯಾಳುಗಳಿಗೆ ಚಿಕಿತ್ಸೆ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಲಾರಿ ಚಾಲಕ ವಾಹನದ ಮೇಲಿನ ನಿಯಂತ್ರಣ ಕಳೆದುಕೊಳ್ಳಲು ನಿಖರ ಕಾರಣವೇನು ಎಂಬುದು ತನಿಖೆಯಿಂದ ತಿಳಿದುಬರಬೇಕಿದೆ.


ಫ್ರಾನ್ಸ್ ನಲ್ಲಿ ನಿಲ್ಲದದಂಗೆ, ಅಲ್ಬೇನಿಯಾದಲ್ಲೂ ಭಾರಿ ಹಿಂಸಾತ್ಮಕ ಪ್ರತಿಭಟನೆ

❏ ನೈಜ್ಯ ದೆಸೆ ನ್ಯೂಸ್

ಪ್ಯಾರಿಸ್: ಇಂಧನ ಬೆಲೆ ಏರಿಕೆ, ಜೀವನ ವೆಚ್ಚ ಹೆಚ್ಚಳ ಹಾಗೂ ಸಾರ್ವಜನಿಕ ಸೇವೆಗಳ ಕುಸಿತವನ್ನು ವಿರೋಧಿಸಿ ಫ್ರಾನ್ಸ್‌ನಲ್ಲಿ ನಡೆದ ಬೃಹತ್ ಪ್ರತಿಭಟನೆಗಳು ಹಿಂಸಾಚಾರ ಮತ್ತು ಲೂಟಿಗೆ ತಿರುಗಿದ್ದು, ದೇಶದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವಂತೆ ಅಧ್ಯಕ್ಷ ಎಮ್ಮಾನುಯೆಲ್ ಮ್ಯಾಕ್ರನ್ ಮನವಿ ಮಾಡಿದ್ದಾರೆ.

ಎಲಿಸೀ ಅರಮನೆಯಿಂದ ದೇಶವನ್ನುದ್ದೇಶಿಸಿ ಮಾತನಾಡಿದ ಮ್ಯಾಕ್ರನ್, ಪ್ರತಿಭಟನಾಕಾರರು ಪರಿಸ್ಥಿತಿಯನ್ನು ಮತ್ತಷ್ಟು ಉದ್ವಿಗ್ನಗೊಳಿಸಬಾರದು ಎಂದು ಎಚ್ಚರಿಸಿದರು. "ನಾವೆಲ್ಲರೂ ಕೋಪ ಮತ್ತು ನಾಚಿಕೆಯನ್ನು ಅನುಭವಿಸುತ್ತಿದ್ದೇವೆ" ಎಂದು ಅವರು ಹೇಳಿದರು. ಈ ನಡುವೆ ಪ್ಯಾರಿಸ್‌ನ ಕೆಲವು ಭಾಗಗಳಲ್ಲಿ ಅಶಾಂತಿ ಮುಂದುವರಿದಿದ್ದು, ಜೀವನ ವೆಚ್ಚದ ಹೆಚ್ಚಳ ಹಾಗೂ ಶಾಲೆಗಳು ಸೇರಿದಂತೆ ಸಾರ್ವಜನಿಕ ಸೇವೆಗಳ ಗುಣಮಟ್ಟ ಕುಸಿಯುತ್ತಿರುವುದನ್ನು ವಿರೋಧಿಸಿ ನಡೆದ ಪ್ರತಿಭಟನೆಗಳು ಆರಂಭದಲ್ಲಿ ಬಹುತೇಕ ಶಾಂತಿಯುತವಾಗಿದ್ದವು.

ಆದರೆ, ಬಳಿಕ ಕೆಲವು ಪ್ರದೇಶಗಳಲ್ಲಿ ಹಿಂಸಾಚಾರಕ್ಕೆ ತಿರುಗಿದವು. "ಪ್ರತಿಭಟನಾಕಾರರ ನ್ಯಾಯಸಮ್ಮತ ಬೇಡಿಕೆಗಳು ಮತ್ತು ಧ್ವಂಸ, ಹಾನಿ ಹಾಗೂ ಲೂಟಿಯಲ್ಲಿ ತೊಡಗಿದವರ ನಡುವೆ ವ್ಯತ್ಯಾಸ ಗುರುತಿಸಬೇಕು" ಎಂದು ಮ್ಯಾಕ್ರನ್ ಹೇಳಿದರು. ಫ್ರಾನ್ಸ್‌ನ ಆಂತರಿಕ ಸಚಿವಾಲಯದ ಪ್ರಕಾರ, ಪೊಲೀಸರು ಸುಮಾರು 2,400 ಮಂದಿಯನ್ನು ಬಂಧಿಸಿದ್ದಾರೆ. "ಯಾವುದೇ ಕಾರಣವೂ



ಇಂತಹ ನಿಯಂತ್ರಣವಿಲ್ಲದ ಹಿಂಸಾಚಾರವನ್ನು ಸಮರ್ಥಿಸುವುದಿಲ್ಲ. ಹಿಂಸಾಚಾರದಲ್ಲಿ ಭಾಗಿಯಾದವರು ಕಾನೂನು ಕ್ರಮವನ್ನು ಎದು–ರಿಸಬೇಕಾಗುತ್ತದೆ" ಎಂದು ಅವರು ಎಚ್ಚ–ರಿಸಿದರು. ಕಪ್ಪು ಬಟ್ಟೆ ಧರಿಸಿ, ಮುಖಕ್ಕೆ ಮಾಸ್ಕ್ ಹಾಗೂ ಬಲಾಕ್ಲಾವಾಗಳನ್ನು ಹಾಕಿಕೊಂಡಿದ್ದ ಗುಂಪುಗಳು ಪ್ಯಾರಿಸ್, ಮಾರ್ಸೆಲ್ ಸೇ–ರಿದಂತೆ ಹಲವು ನಗರಗಳಲ್ಲಿ ಗಲಭೆ ನಡೆಸಿದವು.

ಕೆಲವು ಕಡೆ ಕಾರುಗಳು ಮತ್ತು ಕಟ್ಟಡಗಳಿಗೆ ಬೆಂಕಿ ಹಚ್ಚಲಾಗಿದೆ. ಭಾನುವಾರವೂ ಪ್ಯಾರಿಸ್‌ನ ಕೆಲವು ಪ್ರದೇಶಗಳು ಹಾಗೂ ಲಿಯಾನ್‌ನಲ್ಲಿ ಸಣ್ಣ ಪ್ರಮಾಣದಲ್ಲಿ ಲೂಟಿ ಮತ್ತು ಪೊಲೀಸರೊಂದಿಗೆ ಘರ್ಷಣೆಗಳು ಮುಂದುವರಿದವು. ಆಧುನಿಕ ಫ್ರಾನ್ಸ್‌ನ ಇತಿಹಾಸದಲ್ಲಿನ ಅತ್ಯಂತ ಗಂಭೀರ ಅಶಾಂತಿಯ ಘಟನೆಗಳಲ್ಲಿ ಒಂದಾಗಿ ಪರಿಣಮಿಸಿದ ಈ ಹಿಂಸಾಚಾರದ ಪರಿಣಾಮ ದೇಶದ ಹಲವು ನಗರಗಳಲ್ಲಿ ಕಂಡುಬಂದಿದೆ. ಲಿಮೋಜ್ ನಗರದಲ್ಲಿ 19ನೇ ಶತಮಾನದ ಐತಿಹಾಸಿಕ ನಗರಸಭೆ ಕಟ್ಟಡಕ್ಕೆ ಗಲಭೆಕೋರರು ಬೆಂಕಿ ಹಚ್ಚಿದ್ದಾರೆ. ಬೆಂಕಿಯ ತೀವ್ರತೆಗೆ ಕಟ್ಟಡದ ಗಡಿಯಾರ ಗೋಪುರ ಮತ್ತು ಮೇಲ್ಛಾವಣಿ ಕುಸಿದಿದ್ದು, ಕಟ್ಟಡದ ಬಹುಭಾಗ ಸುಟ್ಟುಹೋಗಿದೆ.

ಧ್ವಂಸಗೊಂಡ ಕಟ್ಟಡದ ಸಮೀಪ ಮಾತನಾಡಿದ ಅನ್ನೇಯ್ಸ್ ಎಂಬ ಮಹಿಳೆ, "ಇದು ತುಂಬಾ ನೋವುಂಟುಮಾಡುವ ಸಂಗತಿ. ಸರ್ಕಾರದ ವಿರುದ್ಧ ಕೋಪವಿದೆ ಎಂಬ ಕಾರಣಕ್ಕೆ ಐತಿಹಾಸಿಕ ಕಟ್ಟಡಗಳಿಗೆ ಹಾನಿ ಮಾಡುವುದು ಸ್ವಾರ್ಥದ ವರ್ತನೆ. ಇದರಿಂದ ಎಲ್ಲರಿಗೂ ತೊಂದರೆಯಾಗುತ್ತದೆ" ಎಂದು ಹೇಳಿದರು. ಗೆರಾರ್ಡ್ ಎಂದು ಪರಿಚಯಿಸಿಕೊಂಡ ಮತ್ತೊಬ್ಬ ವ್ಯಕ್ತಿ, "ಇದು ಭಯಾನಕ ಮತ್ತು ನಂಬಲಸಾಧ್ಯವಾದ ಘಟನೆ. ನಮಗೆ ತುಂಬಾ ದುಃಖವಾಗಿದೆ. ಈ ಕಟ್ಟಡವನ್ನು ಮೊದಲಿನ ಸ್ಥಿತಿಗೆ ತರಲು ಬಹಳ ಸಮಯ ಬೇಕಾಗಬಹುದು ಎಂದು ಭಾವಿಸುತ್ತೇನೆ" ಎಂದರು.

ಅಲ್ಬೇನಿಯಾದಲ್ಲೂ ಭಾರಿ ಹಿಂಸಾಚಾರ : ಅಲ್ಬೇನಿಯಾದ ರಾಜಧಾನಿ ಟಿರಾನಾದಲ್ಲಿ ಸತತ ಆರನೇ ದಿನವೂ ಹಿಂಸಾತ್ಮಕ ಪ್ರತಿಭಟನೆಗಳು ಮುಂದುವರಿದಿವೆ.

ಭಾನುವಾರವೂ ನೂರಾರು ಪ್ರತಿಭಟನಾಕಾರರು ಶಿಕ್ಷಣ ಸಚಿವಾಲಯದ ಎದುರು ಜಮಾಯಿಸಿ, "ಪ್ರಧಾನಿ ರಾಮ ರಾಜೀನಾಮೆ ನೀಡಲಿ" ಎಂದು ಘೋಷಣೆಗಳನ್ನು ಕೂಗಿದರು. ಈ ವೇಳೆ ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವೆ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಯಿತು. ಜನಸಮೂಹವನ್ನು ಚದು–ರಿಸಲು ಪೊಲೀಸರು ರಬ್ಬರ್ ಗುಂಡುಗಳು, ಜಲಫಿರಂಗಿ ಮತ್ತು ಅಶ್ರುವಾಯು ಪ್ರಯೋಗಿಸಿದ್ದಾರೆ. ಈ ಪ್ರತಿಭಟನೆಗಳು ಮುಂದಿನ ದಿನಗಳಲ್ಲಿ ಯಾವ ಸ್ವರೂಪ ಪಡೆದುಕೊಳ್ಳಲಿವೆ ಅಥ–ವಾ ಇನ್ನೆಷ್ಟು ದಿನ ಮುಂದುವ–ರಿಯಲಿವೆ ಎಂಬುದನ್ನು ಅಂದಾಜಿಸುವುದು ಕಷ್ಟವಾಗಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ. ಪ್ರಧಾನಿ ಎಡಿ ರಾಮ ಅವರು ತಮ್ಮ ನಿರ್ಧಾರದಲ್ಲಿ ದೃಢವಾಗಿದ್ದು, ತಾವು ರಾಜೀನಾಮೆ ನೀಡುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಸಾಮಾಜಿ–ಕ ಮಾಧ್ಯಮದ ನೇರ ಪ್ರಸಾರದಲ್ಲಿ ಮಾತನಾಡಿದ ಪ್ರಧಾನಿ ಎಡಿ ರಾಮ, "ಸರ್ಕಾರಕ್ಕೆ ಯಾವುದೇ ಸವಾಲು ಎದುರಾಗಿಲ್ಲ" ಎಂದು ಹೇಳಿದರು. ಆದ–ರೆ ದೇಶದಲ್ಲಿ ಮುಂದುವರಿದಿರುವ ಅಶಾಂತಿಯು ಅಲ್ಬೇನಿಯಾ ಯುರೋಪಿಯನ್ ಒಕ್ಕೂಟದ ಸದಸ್ಯತ್ವ ಪಡೆಯುವ ಹಾದಿಯ ಮೇಲೆ ಪರಿಣಾಮ ಬೀರಬಹುದು ಎಂಬ ಸುಳಿವನ್ನೂ ನೀಡಿದರು.

"ಅಲ್ಬೇನಿಯನ್ನರು ಈ ಬಗ್ಗೆ ಬಹಳ ಸ್ಪಷ್ಟವಾಗಿ ಯೋಚಿಸಬೇಕು. ಅವ–ರಿಗೆ ಈ (ಅಶಾಂತಿಯ) ಪರಿಸ್ಥಿತಿ ಬೇಕೇ ಅಥ–ವಾ ಯುರೋಪಿಯನ್ ಒಕ್ಕೂಟ ಬೇಕೇ?" ಎಂದು ರಾಮ ಪ್ರಶ್ನಿಸಿದರು. ಅಲ್ಬೇನಿಯಾ 2030ರ ವೇಳೆಗೆ ಯುರೋಪಿಯನ್ ಒಕ್ಕೂಟದ ಸದಸ್ಯತ್ವ ಪಡೆಯುವ ಗುರಿ ಹೊಂದಿದೆ. ಪ್ರತಿಭಟನಾಕಾರರ ಪ್ರಮುಖ ಬೇಡಿಕೆಗಳು: ಶಿಕ್ಷಣ ವ್ಯವಸ್ಥೆಯಲ್ಲಿ ಸಮಗ್ರ ಸುಧಾರಣೆ ತರಬೇಕು.

ಯುವಜನರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸಬೇಕು. ದೇಶದಲ್ಲಿ ನಡೆಯುತ್ತಿದೆ ಎನ್ನಲಾದ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು. ಪ್ರಧಾನಿ ಎಡಿ ರಾಮ ಅವರು ತಕ್ಷಣ ರಾಜೀನಾಮೆ ನೀಡಬೇಕು. ಸ್ಥಳೀಯ ಮಾಧ್ಯಮಗಳ ವರದಿಗಳ ಪ್ರಕಾರ, ಅಲ್ಬೇನಿಯಾದ ರಾಜಧಾನಿ ಟಿರಾನಾದಲ್ಲಿ ಪ್ರತಿಭಟನಾಕಾರರು ಮುಖ್ಯವಾಗಿ ಸರ್ಕಾರಿ ಕಚೇರಿಗಳು ಮತ್ತು ಪೊಲೀಸರನ್ನು ಗು–ರಿಯಾಗಿಸಿಕೊಂಡು ದಾಳಿ ನಡೆಸುತ್ತಿದ್ದಾರೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101